ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

30 ಸೆಪ್ಟೆಂಬರ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -199 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತದ 4 x 400 ಮೀಟರ್ಸ್ ರಿಲೆ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ಗೆದ್ದಿತು. ಮಂಗಳವಾರ ನಡೆದ ಓಟದಲ್ಲಿ ಕನ್ನಡತಿ ಎಂ.ಆರ್.ಪೂವಮ್ಮ, ಕಿರಣ್ ಪಹಲ್, ಪ್ರಾಚಿ ಮತ್ತು ವಿದ್ಯಾರಾಮರಾಜ್ ಅವರ ತಂಡವು ಚಿನ್ನದ ಪದಕ ಗಳಿಸಿತು.


ಬಿಸಿಲಿನಿಂದ ಬಂದ ತಕ್ಷಣ ಎಸಿ ಆನ್ ಮಾಡಬಾರದೇಕೆ ? » 2


ಆಟ, ಪಾಠದ ನಡುವೆ ಸಮತೋಲನ ಇದ್ದರೆ ಯಶಸ್ಸು ಸಾಧ್ಯ » 3


ರಸ್ತೆ ಬದಿ ಕಸ : ಸಿಸಿಟಿವಿ ಕ್ಯಾಮರಾ ಅಳವಡಿಕೆ » 4

# ನೈಸ್: 2ಜಿ, ಕಲ್ಲಿದ್ದಲಿಗಿಂತ ದೊಡ್ಡ ಹಗರಣ

## 3 ಲಕ್ಷ ಕೋಟಿಗಿಂತ ಹೆಚ್ಚಿನ ಅವ್ಯವಹಾರ | ಹೆಚ್.ಡಿ.ಕುಮಾರಸ್ವಾಮಿ ದಾಖಲೆ ಬಿಡುಗಡೆ

• ಪ್ರಜೋದಯ ವರದಿ

**ಬೆಂಗಳೂರು:** ನೈಸ್ ಯೋಜನೆ ದೇಶದ 2ಜಿ ಸ್ಪೆಕ್ಟ್ರಮ್, ಕಲ್ಲಿದ್ದಲು ಹಗರಣಕ್ಕಿಂತ ದೊಡ್ಡದು. 3 ಲಕ್ಷ ಕೋಟಿಗಿಂತ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ದಾಖಲೆಗಳನ್ನು ಬಿಡುಗಡೆ ಮಾಡುವ ಮೂಲಕ ಗಂಭೀರ ಆರೋಪ ಮಾಡಿದ್ದಾರೆ.

ಮಂಗಳವಾರ ಖಾಸಗಿ ಹೋಟೇಲ್‌ನಲ್ಲಿ ನಡೆದ ಸುದೀರ್ಘ ಸುದ್ದಿಗೋಷ್ಠಿಯಲ್ಲಿ ದಾಖಲೆಗಳನ್ನು ಎಲ್‌ಇಡಿ ಪರದೆ ಮೇಲೆ ಎಳೆ ಎಳೆಯಾಗಿ ಬಿಚ್ಚಿಟ್ಟ ಅವರು, ನೈಸ್ ಯೋಜನೆಯ ಮೂಲವೇ ಬೇರೆ. ಒಪ್ಪಂದವಾಗಿದ್ದೇ ಬೇರೆ. ನೈಸ್ ಯೋಜನೆಗೂ ದೇವೇಗೌಡರು ಅಂದು ಸಹಿ ಹಾಕಿದ್ದಕ್ಕೂ ಯಾವುದೇ ಸಂಬಂಧ ಇಲ್ಲ. ಬೇಕಿದ್ದರೆ ರಾಜ್ಯ ಸರ್ಕಾರ ವಿಧಾನಸೌಧದ ಮೆಟ್ಟಿಲ ಮೇಲೆ ಈ ಬಗ್ಗೆ ಚರ್ಚೆ ಬರಲಿ ನಾನು ಸಿದ್ಧವೆಂದು ಮುಖ್ಯಮಂತ್ರಿಗೆ ಪಂಥಾಹ್ವಾನ ನೀಡಿದರು.



> ಈಗ ಬಿಡುಗಡೆ ಮಾಡಿರುವುದು ಒಂದು ಸಣ್ಣ ವಿಚಾರ ಅಷ್ಟೇ. ಮುಂದೆ ಮತ್ತೊಂದು ಬರುತ್ತೆ. ಇದು ಪಾರ್ಟ್ 1 , ಪಾರ್ಟ್ 2. ಪಾರ್ಟ್ 3 ಕೂಡ ಇದೆ. ಕೆಜಿಎಫ್ ಪಾರ್ಟ್ 3, ಕೆಜಿಎಫ್ 3 ಎಲ್ಲಾ ಬರುತ್ತದೆ.
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮೊದಲು ನೈಸ್ ಕಂಪೆನಿ ಇರಲಿಲ್ಲ. ವಿಹೆಚ್‌ಬಿ, ಕಲ್ಯಾಣಿ ಗ್ರೂಪ್ ಆಫ್ ಕಂಪೆನಿ, ಸ್ನ್ಯಾಬ್ ಇಂಜಿನೀಯರಿಂಗ್ ಕಂಪೆನಿ ಜೊತೆ ದೇವೇಗೌಡರು ಸಹಿ ಹಾಕಿದ್ದರು. ಫೆ.20ರ 1995ರಲ್ಲಿ ಈ ಒಪ್ಪಂದ ಆಗಿತ್ತು. ಆಗಿನ ಮೇ ತಿಂಗಳಲ್ಲೇ ಈ ಕಂಪೆನಿ ಹಲವಾರು ಪತ್ರ ವ್ಯವಹಾರ ಮಾಡಿತ್ತು. ನಂತರ ಭೂಮಿ ಸ್ವಾಧೀನ ಕುರಿತಂತೆ ಡಿಪಿಆರ್ ಮತ್ತು ಲಾಭ-ನಷ್ಟದ ಬಗ್ಗೆ ಚರ್ಚೆಯೂ ನಡೆದಿತ್ತು ಎಂದು ವಿವರಿಸಿದರು.

1995 ನ.8 ರಂದು ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. 30 ವರ್ಷ ಟೋಲ್ ಸಂಗ್ರಹಕ್ಕೆ ಅವಕಾಶ ನೀಡಲಾಗಿತ್ತು. ಭೂಮಿ ಸ್ವಾಧೀನ ವೆಚ್ಚವನ್ನು ಅವರೇ ಭರಿಸಬೇಕೆಂಬ ನಿಯಮಾನುಸಾರ ಅನುಮತಿ ನೀಡಲಾಗಿತ್ತು. ನಂತರ ಜೆ.ಹೆಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಯೋಜನೆಗೆ ಭಾರತ್ ಫೋರ್ ಲಿಮಿಟೆಡ್‌ಗೆ 1997ರಲ್ಲಿ ಮಂಜೂರಾತಿ ನೀಡಿದ್ದರು. ಆಗ ಕೂಡ ಇನ್ನೂ ನೈಸ್ ಬಂದಿರಲಿಲ್ಲವೆಂದು ತಿಳಿಸಿದರು.

ಯೋಜನೆಗಾಗಿ ಉತ್ತಮ ಕೃಷಿ ಭೂಮಿಯನ್ನು ಗುರುತಿಸದೆ, ಬರಡು ಭೂಮಿಯನ್ನು ಬಳಸಬೇಕೆಂಬ ನಿಯಮವಿತ್ತು. ರಸ್ತೆ ಕಾಮಗಾರಿಗೆ 6,999 ಎಕರೆ ಭೂಮಿಗೆ ಬದ್ಧತೆ ಮಾಡಲಾಗಿತ್ತು. ಫ್ರೆಮ್‌ವರ್ಕ್ ಒಪ್ಪಂದ ಮಾಡಿಕೊಂಡು ಯಾವುದೇ ನಿಯಮ ಉಲ್ಲಂಘಿಸಬಾರದು ಹಾಗು ಕೆರೆಗಳನ್ನು ಮುಟ್ಟಬಾರದೆಂಬ ಷರತ್ತು ಗಳಿದ್ದವು. 1998ರಲ್ಲಿ ವಿದೇಶಿ ಕಂಪನಿ ಯೋಜನೆ ಯಿಂದ ಹಿಂದೆ ಸರಿದ ಬಳಿಕ ನೈಸ್ ಕಂಪನಿ ಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು. 2002ರ ಆಗಸ್ಟ್‌ನಲ್ಲಿ

» ನಾಲ್ಕನೇ ಪುಟದಲ್ಲಿ

### ಸಿ.ಎಂ. ಕುಟುಂಬ ಭೂಮಿ ಖರೀದಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕುಟುಂಬದವರು ನೈಸ್ ಯೋಜನೆಯ ವ್ಯಾಪ್ತಿಗೆ ಬರುವ ಭೂಮಿಯನ್ನು ಖರೀದಿಸಿರುವ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದರು. ಅಧಿಸೂಚನೆಗೊಂಡಿದ್ದ ಭೂಮಿಯನ್ನು ಡಿ.ಕೆ.ಸುರೇಶ್ ಖರೀದಿಸಿದ್ದಾರೆ. ನಂತರ ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಪರಿವರ್ತಿಸಲು ಅರ್ಜಿ ಸಲ್ಲಿಸಲಾಗಿತ್ತು. 2011ರಲ್ಲಿ ಶೋಭಾ ಡೆವಲಪರ್ಸ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದರು.

# ಪಾಲಿಕೆ ಇಂಜಿನೀಯರ್ ಸತ್ಯನಾರಾಯಣ ಅಮಾನತು

• ಪ್ರಜೋದಯ ವರದಿ



**ಹಾಸನ:** ಆದಾಯಕ್ಕಿಂತ ಅಧಿಕ ಆಸ್ತಿಗಳಿಕೆ ಆರೋಪದಡಿ ಮಹಾನಗರ ಪಾಲಿಕೆ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಎಂ.ಸಿ. ಸತ್ಯನಾರಾಯಣ ಅವರನ್ನು ಸೇವೆಯಿಂದ ಅಮಾನುಗೊಳಿಸಲಾಗಿದೆ.

ಮಾ.5ರಂದು ಸತ್ಯನಾರಾಯಣ ಅವರ ಮನೆ ಹಾಗು ಕಚೇರಿಗಳ ಮೇಲೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು ಜಿಲ್ಲಾ ನ್ಯಾಯಾಲಯಕ್ಕೆ ಶೋಧನಾ ವಾರೆಂಟ್ ಪಡೆದಿದ್ದರು. ದಾಳಿ ವೇಳೆ ಆದಾಯಕ್ಕಿಂತ ಶೇ.214 ರಷ್ಟು ಅಧಿಕ ಆಸ್ತಿ ಇರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಇನ್ನು ಕೆಲವು ಮಾಹಿತಿ ವಿಚಾರಣೆಯಿಂದ ತಿಳಿದು ಬರಬೇಕಿದ್ದು, ಅಧಿಕಾರಿಯು ಆರ್ಥಿಕ ಮತ್ತು ರಾಜಕೀಯವಾಗಿ ಪ್ರಭಾವಶಾಲಿಯಾಗಿದ್ದಾರೆ. ಪ್ರಕರಣದ ತನಿಖೆಗೆ ಅಡ್ಡಿ ಮತ್ತು ಹಸ್ತಕ್ಷೇಪ, ಸಾಕ್ಷಿ ನಾಶಪಡಿಸುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10ರ ಅಡಿ ಸೇವೆಯಿಂದ ಅಮಾನುತುಗೊಳಿಸಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ತಿಳಿಸಿದ್ದಾರೆ.

ಏಳು ತಿಂಗಳ ಹಿಂದೆ ಲೋಕಾಯುಕ್ತ ಅಧಿಕಾರಿಗಳು ಸತ್ಯನಾರಾಯಣ ಅವರ ಹಾಸನದ ರವೀಂದ್ರ ನಗರದ ನಿವಾಸ, ಬೆಂಗಳೂರಿನ ಸದಾಶಿವ ನಗರದ 2 ಮನೆ, ಅವರ ಒಡೆತನದ ಬೇಲೂರು ರಸ್ತೆಯ ಪಾಂಡಿತ್ಯ ಎಜುಕೇಷನ್ ಟ್ರಸ್ಟ್, ರವೀಂದ್ರ ನಗರ ಹಾಗು ಚನ್ನಪಟ್ಟಣ ಬಡಾವಣೆಯ ಯುರೋ ಕಿಡ್ಸ್ ಶಾಲೆ ಹಾಗು ಮಹಾನಗರ ಪಾಲಿಕೆ ಕಚೇರಿ ಮೇಲೆ ದಾಳಿ ನಡೆಸಿ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದರು.

ಪ್ರಾಥಮಿಕ ತನಿಖೆಯಲ್ಲಿ ಅಧಿಕಾರಿಯು 7,50,40,013 ರೂ. (ಶೇ. 214) ಅಕ್ರಮ ಆಸ್ತಿ ಹೊಂದಿರುವುದು ತಿಳಿದುಬಂದಿದೆ. ಸರ್ಕಾರಿ ಸೇವೆಯ ವರಮಾನಕ್ಕಿಂತ ಹೆಚ್ಚಿನ ಮೊತ್ತದ ಆಸ್ತಿ ಇರುವುದು ಕಂಡುಬಂದಿದೆ ಎಂದು ಲೋಕಾಯುಕ್ತ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ಹಾಸನಾಂಬ ಜಾತ್ರೆ: ವಿಶೇಷ ರೈಲು ಸಂಪರ್ಕಕ್ಕೆ ಮನವಿ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರೆಗೆ ಬರುವ ಭಕ್ತರ ಅನುಕೂಲಕ್ಕಾಗಿ ವಿಶೇಷ ರೈಲು ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಮನವಿ ಮಾಡಿದ್ದಾರೆ.

ಅ.29ರಿಂದ ನ.11ರ ವರೆಗೆ ಹಾಸನಾಂಬ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ. ಬೆಂಗಳೂರು, ಮಂಗಳೂರು ಹಾಗು ಮೈಸೂರಿನಿಂದ ಮತ್ತು ಹುಬ್ಬಳ್ಳಿ-ಹಾಸನ ಮಾರ್ಗಗಳಲ್ಲಿ ಅ.28ರಿಂದ ನ.12ರ ವರೆಗೆ ವಿಶೇಷ ರೈಲುಗಳ ಸಂಪರ್ಕ ಕಲ್ಪಿಸುವಂತೆ ಕೋರಿದ್ದಾರೆ.



ಹಾಸನ ಮಾರ್ಗವಾಗಿ ಸಂಚರಿಸುವ ನಿಯಮಿತ ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಜೋಡಿಸುವುದು, ಪ್ರಯಾಣಿಕರ ಬೇಡಿಕೆಗೆ ಅನುಗುಣ ವಾಗಿ ಮುಂಜಾನೆ ಮತ್ತು ತಡರಾತ್ರಿ ರೈಲು ಸೇವೆಗಳನ್ನು ಒದಗಿಸುವುದು ಹಾಗು ಹಾಸನ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಟಿಕೆಟ್ ಮತ್ತು ವಿಚಾರಣಾ ಕೌಂಟರ್‌ಗಳನ್ನು ತೆರೆಯುವಂತೆಯೂ ಮನವಿ ಮಾಡಿದ್ದಾರೆ.

ನಿಲ್ದಾಣದಲ್ಲಿ ಸಾಕಷ್ಟು ಆರ್‌ಪಿಎಫ್ ಸಿಬ್ಬಂದಿ, ವೈದ್ಯಕೀಯ ನೆರವು, ಜನಸಂದಣಿ ನಿರ್ವಹಣೆ, ಕುಡಿಯುವ ನೀರು, ಸ್ವಚ್ಛತೆ ಮತ್ತು ಪ್ರಯಾಣಿಕರಿಗೆ ಅಗತ್ಯ ಸೌಲಭ್ಯ ಒದಗಿಸಬೇಕು. ರೈಲುಗಳ ಮಾರ್ಗ, ಸಮಯ ಮತ್ತು ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯ ಮಾಹಿತಿಯನ್ನು ಮುಂಚಿತವಾಗಿ ಪ್ರಕಟಿಸಬೇಕೆಂದರು.

ಪ್ರಯಾಣಿಕರ ಬೇಡಿಕೆ ಮತ್ತು ಕಾರ್ಯಾಚರಣೆಯ ಸಾಧ್ಯತೆಗಳನ್ನು ತಕ್ಷಣ ಪರಿಶೀಲಿಸಿ, ಪ್ರಸ್ತಾವನೆಯನ್ನು ನೈರುತ್ಯ ರೈಲ್ವೆ ಮುಖ್ಯ ಕಚೇರಿಗೆ ಸಲ್ಲಿಸುವಂತೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೂ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದರು.

# ರೈತರ ಸಾಲ ಮನ್ನಾ: ಕೇಂದ್ರವೇ ನಿರ್ಧಾರ ಕೈಗೊಳ್ಳಲಿ

## ಬರ ಪರಿಹಾರಕ್ಕೆ ಕೇಂದ್ರ ಸರ್ಕಾರದ ನೆರವು ಅಗತ್ಯ | ಸಹಕಾರ ಸಚಿವ ಲಕ್ಷ್ಮಣ್ ಸವದಿ

• ಪ್ರಜೋದಯ ವರದಿ

**ಹಾಸನ :** ರೈತರ ಸಾಲ ಮನ್ನಾ ಮಾಡಲು ಜನಸಾಮಾನ್ಯರ ಮನವಿ ಜೊತೆಗೆ ವಿರೋಧ ಪಕ್ಷಗಳೂ ಒತ್ತಾಯಿಸುತ್ತಿವೆ. ರಾಜ್ಯ ಸರ್ಕಾರ ಸಾಲ ಮನ್ನಾ ಮಾಡುವುದಿಲ್ಲವೆಂದು ಹೇಳುತ್ತಿಲ್ಲ. ಆದರೆ, ಈ ವಿಚಾರದಲ್ಲಿ ಕೇಂದ್ರ ಸರ್ಕಾರವೂ ಜವಾಬ್ದಾರಿ ವಹಿಸಬೇಕೆಂದು ಸಹಕಾರ ಸಚಿವ ಲಕ್ಷ್ಮಣ್ ಸವದಿ ಅವರು ತಿಳಿಸಿದರು.

ಮಂಗಳವಾರದ ಶ್ರವಣ ಬೆಳಗೊಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಲಮನ್ನಾ ವಿಚಾರದಲ್ಲಿ ಕೇಂದ್ರ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಆಧರಿಸಿ ರಾಜ್ಯ ಸರ್ಕಾರವೂ ಮುಂದಿನ ನಿರ್ಧಾರ ಕೈಗೊಳ್ಳಲಿದೆ. ಬರ ಪರಿಸ್ಥಿತಿಯ ಕುರಿತು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲು ರಾಜ್ಯದಿಂದ ಸರ್ವ ಪಕ್ಷ ನಿಯೋಗವನ್ನು ಕರೆದೊಯ್ಯಲಾಗುವುದು. ಪ್ರಧಾನಮಂತ್ರಿ, ಕೃಷಿ ಸಚಿವರು ಮತ್ತು ಗೃಹ ಸಚಿವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ವಿವರಿಸಲಾಗುವುದು. ಬಳಿಕ ಎರಡೂ ಸರ್ಕಾರಗಳು ಸೇರಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಿವೆ ಎಂದರು.



ರಾಜ್ಯದಲ್ಲಿ ಬರ ಘೋಷಣೆಯಾಗಿದ್ದು, ಮುಂದಿನ ಒಂದು ತಿಂಗಳಲ್ಲಿ ಪಟ್ಟಣ ಮತ್ತು ನಗರ ಪ್ರದೇಶಗಳನ್ನು ಹೊರತು ಪಡಿಸಿ ಗ್ರಾಮೀಣ ಭಾಗಗಳಲ್ಲಿ ಬರದ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದೆ. ಸುಮಾರು 200 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಕಳೆದ 50 ವರ್ಷಗಳ ಇತಿಹಾಸದಲ್ಲಿ ಈ ವರ್ಷ ಅತ್ಯಂತ ಕಡಿಮೆ ಮಳೆಯಾಗಿದೆ. ಸದ್ಯ ಬರದ ಪರಿಸ್ಥಿತಿ ಆರಂಭಿಕ ಹಂತದಲ್ಲಿದ್ದು, ಹಾನಿಯ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ರಾಜ್ಯಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಲಿದೆ. ಬೆಳೆ ಹಾನಿ, ಜಾನುವಾರುಗಳ ರಕ್ಷಣೆ

» ನಾಲ್ಕನೇ ಪುಟದಲ್ಲಿ

### ಶೀಘ್ರವೇ ಜಿ.ಪಂ, ತಾ.ಪಂ ಚುನಾವಣೆಗೆ ಅಧಿಸೂಚನೆ

ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಲು ತೀರ್ಮಾನಿಸಲಾಗಿದೆ. ಮೀಸಲಾತಿ ಅಂತಿಮಗೊಳಿಸುವ ಸಂಬಂಧ ಬುಧವಾರ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು. ಕೆಲವೇ ದಿನಗಳಲ್ಲಿ ಅಧಿಸೂಚನೆ ಹೊರಡಿಸಿ ಚುನಾವಣೆ ಘೋಷಣೆ ಮಾಡುವ ನಿರೀಕ್ಷೆ ಇದೆ ಎಂದು ಲಕ್ಷ್ಮಣ್ ಸವದಿ ಅವರು ತಿಳಿಸಿದರು.

> ರೈತರಿಗೆ ಆಗಿರುವ ನಷ್ಟವನ್ನು ತುಂಬಿಕೊಡುವುದು ಎರಡೂ ಸರ್ಕಾರಗಳ ಕರ್ತವ್ಯವಾಗಿದೆ. ರಾಜ್ಯ ಸರ್ಕಾರ ನೀಡಿರುವ 2,500 ರೂ. ತಾತ್ಕಾಲಿಕ ಪರಿಹಾರ ಮಾತ್ರ. ಮುಂದಿನ ದಿನಗಳಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ರೈತರಿಗೆ ನೀಡಿರುವ ಸಾಲದಲ್ಲಿ ಕೇಂದ್ರ ಸರ್ಕಾರದ ಪಾಲೂ ಇರುವುದರಿಂದ ಕೇಂದ್ರವೂ ಸಹಕಾರ ನೀಡಬೇಕು.
> -ಲಕ್ಷ್ಮಣ್ ಸವದಿ, ಸಹಕಾರ ಸಚಿವ

# ಲಾರಿ ಡಿಕ್ಕಿ : ಯುವತಿ ಸಾವು

• ಪ್ರಜೋದಯ ವರದಿ



**ಹಾಸನ :** ನಗರದ ಬಿ.ಎಂ. ರಸ್ತೆಯಲ್ಲಿ ಮಂಗಳವಾರ ರಾತ್ರಿ 8.45ರ ಸಮಯದಲ್ಲಿ ನಡೆದ ಭೀಕರ ಅಪಘಾತದಲ್ಲಿ ನಗರ ಹೊರವಲಯದ ಗಾಂಧಿ ನಗರದ ಲಿಖಿತಾ ಸ್ಥಳದಲ್ಲೇ ಮೃತ ಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ.

ರಾತ್ರಿ ಬೈಕ್‌ನಲ್ಲಿ ಇಬ್ಬರು ಜಿಲ್ಲಾಸ್ಪತ್ರೆ ರಸ್ತೆ ಕಡೆಯಿಂದ ಡೈರಿ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ ಎನ್.ಆರ್.ವೃತ್ತದಿಂದ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದು ಸುಮಾರು 200 ಮೀಟರ್‌ನಷ್ಟು ದೂರು ಬೈಕ್‌ನೊಂದಿಗೆ ಯುವತಿಯನ್ನು ಎಳೆದುಕೊಂಡು ಹೋಗಿದೆ. ಹಿಂಬದಿಯ ಚಕ್ರಕ್ಕೆ ಸಿಲುಕಿ ಯುವತಿ ಮೃತಪಟ್ಟಿದ್ದಾಳೆ. ಯುವತಿಯ ದೇಹ ಲಾರಿಯ ಚಕ್ರಕ್ಕೆ ಸಿಲುಕಿ ನಜ್ಜುಗುಜ್ಜಾಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ರಾತ್ರಿ ವೇಳೆ ನಗರದಲ್ಲಿ ಲಾರಿ ಸಂಚಾರ ನಿಷೇಧಿಸಬೇಕೆಂದು ಆಗ್ರಹಿಸಿ ಸಾರ್ವಜನಿಕರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಯಾಗಿತ್ತು.

# ಹ್ಯಾಂಡ್ ಎಂಬ್ರಾಯ್ಡರಿ ಕೌಶಲ್ಯ ಉಳಿಸಿ ಬೆಳೆಸಬೇಕು

• ಪ್ರಜೋದಯ ವರದಿ

**ಹಾಸನ:** ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸರ್ಕಾರ ಕೌಶಲ್ಯಾಭಿವೃದ್ಧಿ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಆಸಕ್ತರು ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಅವರು ಹೇಳಿದರು.

ನಗರದ ಸಂಸ್ಕೃತ ಭವನದಲ್ಲಿ ಮಂಗಳವಾರ ಆಲೂರಿನ ಹರ್ಷಿತ ಸಂಸ್ಥೆ, ಹಾಸನಾಂಬ ಗ್ರಾಮೀಣ ಕೈಗಾರಿಕಾ ಕೌಶಲ್ಯ ತರಬೇತಿ ಸಂಸ್ಥೆ ಹಾಗು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ನಡೆದ ಪಾರಂಪರಿಕ ಮತ್ತು ಸಾಂಪ್ರದಾಯಿಕ ಹ್ಯಾಂಡ್ ಎಂಬ್ರಾಯ್ಡರಿ ಕೌಶಲ್ಯ ತರಬೇತಿ ಸಮಾರೋಪ ಹಾಗು ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆರು ತಿಂಗಳ ಅವಧಿಯಲ್ಲಿ ಮೂರು ಬ್ಯಾಚ್‌ಗಳಲ್ಲಿ ತರಬೇತಿ ನೀಡಲಾಗಿದ್ದು, ಪ್ರತಿ ಬ್ಯಾಚ್‌ನಲ್ಲಿ 30 ಮಂದಿಯಂತೆ ಒಟ್ಟು 90 ಜನ ತರಬೇತಿ ಪಡೆದಿದ್ದಾರೆ. ತರಬೇತಿ ಪಡೆದವರಲ್ಲಿ ಶೇ.99ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ. ಅಳಿವಿನಂಚಿನಲ್ಲಿರುವ ಹ್ಯಾಂಡ್ ಎಂಬ್ರಾಯ್ಡರಿ ಕಲೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ತರಬೇತಿ ನೀಡಲಾಗಿದೆ ಎಂದರು.



ತರಬೇತಿ ನೀಡುವುದರ ಜೊತೆಗೆ ಪ್ರಮಾಣಪತ್ರ ವಿತರಿಸಲಾಗಿದ್ದು, ಸ್ವಾವಲಂಬಿ ಬದುಕು ರೂಪಿಸಿಕೊಳ್ಳ

» ನಾಲ್ಕನೇ ಪುಟದಲ್ಲಿ

# ಹಾಸನಾಂಬ ಜಾತ್ರೆಗೆ 13.54 ಕೋ.ರೂ: ಜಿಲ್ಲಾಧಿಕಾರಿ ಅನುಮೋದನೆ

## 48 ವಿವಿಧ ಕಾಮಗಾರಿಗಳಿಗೆ ಟೆಂಡರ್ | ವಿವಿಧ ಇಲಾಖೆಗೆಗಳಿಗೆ ಜವಾಬ್ದಾರಿ ಹಂಚಿಕೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಹಾಗು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಜಿಲ್ಲಾಡಳಿತ ಭರದ ಸಿದ್ಧತೆ ಆರಂಭಿಸಿದೆ. ಜಾತ್ರೆಯನ್ನು ಸುಗಮವಾಗಿ ಹಾಗು ವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ 13.54 ಕೋ.ರೂ. ಅಂದಾಜು ವೆಚ್ಚದ 48 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಬಾರಿ ದರ್ಶನೋತ್ಸವಕ್ಕೆ ಲಕ್ಷಾಂತರ ಭಕ್ತರು ರಾಜ್ಯದ ವಿವಿಧ ಜಿಲ್ಲೆಗಳು ಹಾಗು ಹೊರ ರಾಜ್ಯಗಳಿಂದ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ದರ್ಶನ, ಪ್ರಸಾದ ವಿತರಣೆ, ಭದ್ರತೆ, ಸ್ವಚ್ಛತೆ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಸುಗಮಗೊಳಿಸಲು ಜಿಲ್ಲಾಡಳಿತ ಸಿದ್ಧತೆ ಕೈಗೊಂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಈ ಬಾರಿ ಗ್ರಾಮೀಣ ಕಲಾವೈಭವದೊಂದಿಗೆ ಹಾಸನದ ಹಬ್ಬವಾಗಿ ಆಚರಿಸಲು ಮುಂದಾಗಿದ್ದಾರೆ. ಈ ಹಿನ್ನಲೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದಾರೆ.

ಜಾತ್ರೆಗೆ ಆಗಮಿಸುವ ಭಕ್ತರಿಗೆ ಲಾಡು ಪ್ರಸಾದ ತಯಾರಿಕೆ, ಸಾಗಣೆ ಮತ್ತು ವಿತರಣೆಗೆ 1.50 ಕೋ.ರೂ. ಹಾಗು ದೊನ್ನೆ ಪ್ರಸಾದಕ್ಕೆ 1.50 ಕೋ.ರೂ. ಮೀಸಲಿಡಲಾಗಿದೆ. ಪ್ರಸಾದ ವಿತರಣೆಗೆ ಅಗತ್ಯವಿರುವ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆಗೂ ಅನುದಾನ ನಿಗದಿಪಡಿಸಲಾಗಿದೆ.

ದೇವಾಲಯದ ಒಳಾಂಗಣ ಹಾಗು ಹೊರಾಂಗಣದಲ್ಲಿ ನೆಲಕ್ಕೆ ಮ್ಯಾಟ್ ಅಳವಡಿಕೆ, ತಾತ್ಕಾಲಿಕ ಬ್ಯಾರಿಕೇಡಿಂಗ್, ಜರ್ಮನ್ ಟೆಂಟ್ ಮತ್ತು ಚಪ್ಪರ ನಿರ್ಮಾಣ ಸೇರಿ ವಿವಿಧ ವ್ಯವಸ್ಥೆಗಳಿಗೆ 1.30 ಕೋ.ರೂ. ವೆಚ್ಚದ ಯೋಜನೆ ರೂಪಿಸಲಾಗಿದೆ. ಸರತಿ ಸಾಲಿನಲ್ಲಿ ನಿಲ್ಲುವ ಭಕ್ತರಿಗೆ ಅನುಕೂಲ ಕಲ್ಪಿಸುವುದು, ಮಳೆ ಮತ್ತು ಬಿಸಿಲಿನಿಂದ ರಕ್ಷಣೆ ಒದಗಿಸುವುದು ಹಾಗು ಜನದಟ್ಟಣೆ ನಿಯಂತ್ರಿಸುವುದು ಈ ವ್ಯವಸ್ಥೆಗಳ ಉದ್ದೇಶವಾಗಿದೆ.

ವಿದ್ಯುತ್ ದೀಪಾಲಂಕಾರಕ್ಕೆ 98 ಲ.ರೂ., ಹೂವಿನ ಅಲಂಕಾರ ಮತ್ತು ಕಲಾಕೃತಿಗಳಿಗೆ 90 ಲ.ರೂ., ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 1.10 ಕೋ.ರೂ. ಹಾಗು ತಾತ್ಕಾಲಿಕ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ 80 ಲ.ರೂ.ನಿಗದಿಪಡಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ 30 ಲ.ರೂ.ಮೀಸಲಿಡಲಾಗಿದೆ.

ಜಾತ್ರೆಯ ನಿರ್ವಹಣೆಯಲ್ಲಿ ತಂತ್ರಜ್ಞಾನ ಬಳಕೆಗೆ ಜಿಲ್ಲಾಡಳಿತ ಆದ್ಯತೆ ನೀಡಿದೆ. ಮುದ್ರಣ ಸಾಮಗ್ರಿ, ಬಾರ್ ಕೋಡ್ ತಂತ್ರಾಂಶ, ವಿದ್ಯುನ್ಮಾನ ಉಪಕರಣಗಳು ಹಾಗು ಬಾರ್‌ಕೋಡ್ ಸ್ಕ್ಯಾನಿಂಗ್ ಸಿಬ್ಬಂದಿಗಾಗಿ 85 ಲ.ರೂ. ಮೀಸಲಿಡಲಾಗಿದೆ.

ಆನ್‌ಲೈನ್ ಬುಕ್ಕಿಂಗ್ ನಿರ್ವಹಣೆಗೆ 5 ಲ.ರೂ., ಮೊಬೈಲ್ ಆ್ಯಪ್ ನವೀಕರಣ ಮತ್ತು ನಿರ್ವಹಣೆಗೆ 4 ಲ.ರೂ., ವೆಬ್‌ಸೈಟ್ 4 ಲ.ರೂ. ಹಾಗು ಸಾಮಾಜಿಕ ಜಾಲತಾಣ, ವಿಡಿಯೋ ಚಿತ್ರೀಕರಣ ಮತ್ತು ಸಂಕಲನಕ್ಕೆ 5 ಲ.ರೂ.ನಿಗದಿಪಡಿಸಲಾಗಿದೆ.

ಎಲ್‌ಇಡಿ ಪರದೆ, ದೂರದರ್ಶನ, ವಾಕಿಟಾಕಿ, ವಿಡಿಯೋ ಚಿತ್ರೀಕರಣ, ಅಂತರ್ಜಾಲ ಮತ್ತು ನಿಯಂತ್ರಣ ಕೊಠಡಿ ವ್ಯವಸ್ಥೆಗಳಿಗೆ 50 ಲ.ರೂ., ಜನದಟ್ಟಣೆ ನಿರ್ವಹಣೆಗೆ ಕೃತಕ ಬುದ್ಧಿಮತ್ತೆ ತಂತ್ರಾಂಶ ಅಳವಡಿಕೆ ಹಾಗೂ ಸಿಸಿಟಿವಿ ನಿರ್ವಹಣೆಗೆ 15 ಲ.ರೂ. ವೆಚ್ಚದ ಪ್ರಸ್ತಾವನೆ ಇದೆ. ಪ್ರಚಾರಕ್ಕಾಗಿ ಪತ್ರಿಕೆ, ರೇಡಿಯೋ ಮತ್ತು ದೃಶ್ಯ ಮಾಧ್ಯಮ ಜಾಹೀರಾತುಗಳಿಗೆ ಅನುದಾನ ನೀಡಲಾಗಿದೆ. ಎಲ್‌ಇಡಿ ಜಾಹೀರಾತು, ಸಂಚಾರ ಸೂಚನಾ ಫಲಕಗಳ ನಿರ್ವಹಣೆಗೆ 6 ಲ.ರೂ. ಹಾಗೂ ಸ್ವಾಗತ ಕಮಾನು ನಿರ್ಮಾಣಕ್ಕೆ 35 ಲ.ರೂ.ಮೀಸಲಿಡಲಾಗಿದೆ.

ಜಾತ್ರೆಗೆ ಆಗಮಿಸುವ ಭಕ್ತರಿಗೆ ಕುಡಿಯುವ ನೀರು ಪೂರೈಕೆಗೆ 13 ಲ.ರೂ., ಮಜ್ಜಿಗೆ ವಿತರಣೆಗೆ 10 ಲ.ರೂ. ಹಾಗು ಸರತಿ ಸಾಲಿನಲ್ಲಿ ನಿಲ್ಲುವವರಿಗೆ ಪಾನಕ ಮತ್ತು ಕುಂಕುಮ ವಿತರಣೆಗೆ 3 ಲ.ರೂ. ನಿಗದಿಪಡಿಸಲಾಗಿದೆ. ದೊನ್ನೆ ಪ್ರಸಾದ ವಿತರಣಾ ಕೇಂದ್ರದ ನಿರ್ಮಾಣ ಮತ್ತು ನಿರ್ವಹಣೆಗೆ 20 ಲ.ರೂ., ಹಿರಿಯ ನಾಗರಿಕರು ಹಾಗೂ ದಿವ್ಯಾಂಗರ ಸಾರಿಗೆ ವ್ಯವಸ್ಥೆಗೆ 5 ಲ.ರೂ.ಮೀಸಲಿಡಲಾಗಿದೆ. ವೈದ್ಯಕೀಯ ಸಾಮಗ್ರಿ ಮತ್ತು ಔಷಧಗಳ ನಿರ್ವಹಣೆಗೆ 1.50 ಲ.ರೂ. ಅನುದಾನ ನೀಡಲಾಗಿದೆ.

ಸ್ವಚ್ಛತಾ ಸಿಬ್ಬಂದಿ ಪೂರೈಕೆ ಮತ್ತು ನಿರ್ವಹಣೆಗೆ 8 ಲ.ರೂ. ಹಾಗೂ ಕರ್ತವ್ಯ ನಿರತ ಅಧಿಕಾರಿಗಳು ಮತ್ತು

» ನಾಲ್ಕನೇ ಪುಟದಲ್ಲಿ



### ಪ್ರಮುಖ ವೆಚ್ಚ

- ದೇವಾಲಯದ ಒಳಾಂಗಣದಲ್ಲಿ -ಹೊರಾಂಗಣದಲ್ಲಿ ವ್ಯವಸ್ಥೆ 1.30 ಕೋ.ರೂ.
- ವಿದ್ಯುತ್ ದೀಪಲಂಕಾರ– 98 ಲ.ರೂ.
- ಮುದ್ರಣ ಸಾಮಗ್ರಿ, ತಂತ್ರಾಂಶ, ಬಾರ್ ಕೋಡ್– 85 ಲ.ರೂ.
- ಸಿಬ್ಬಂದಿಯ ಊಟೋಪಚಾರಕ್ಕೆ 75 ಲ.ರೂ.
- ನಿಯಂತ್ರಣ ಕೊಠಡಿ ವ್ಯವಸ್ಥೆಗೆ 50 ಲ.ರೂ.
- ಸ್ವಾಗತ ಕಮಾನು ನಿರ್ಮಾಣ– 35 ಲ.ರೂ.

## ಬಾಹುಬಲಿ ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಕಟ್ಟಡಕ್ಕೆ ಶಂಕುಸ್ಥಾಪನೆ | ಸಚಿವ ಲಕ್ಷ್ಮಣ್ ಸವದಿ ಅಭಿಮತ

# ಎಐ ಯುಗದಲ್ಲಿ ನರ್ಸಿಂಗ್, ಪ್ಯಾರಾ ಮೆಡಿಕಲ್‌ಗೆ ಬೇಡಿಕೆ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಕೃತಕ ಬುದ್ಧಿ ಮತ್ತೆ ತಂತ್ರಜ್ಞಾನ ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಇಂದಿನ ಕಾಲದಲ್ಲಿಯೂ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆ ಹಾಗು ಪ್ರಸ್ತುತತೆ ಇದೆ ಎಂದು ಸಹಕಾರ ಸಚಿವ ಲಕ್ಷ್ಮಣ್ ಸವದಿ ಅವರು ತಿಳಿಸಿದರು.

ಶ್ರವಣಬೆಳಗೊಳದ ಧವಲ ತೀರ್ಥಂನಲ್ಲಿ ಮಂಗಳವಾರ ಬಾಹುಬಲಿ ನರ್ಸಿಂಗ್ ಹಾಗು ಪ್ಯಾರಾ ಮೆಡಿಕಲ್ ಕಾಲೇಜುಗಳ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನರ್ಸಿಂಗ್ ಕ್ಷೇತ್ರದಲ್ಲಿ ಯುವಜನರಿಗೆ ಉತ್ತಮ ಉದ್ಯೋಗಾವಕಾಶಗಳಿದ್ದು, ಆರೋಗ್ಯ ಸೇವೆಯಲ್ಲಿ ನರ್ಸಿಂಗ್ ವೃತ್ತಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.



ಶ್ರವಣಬೆಳಗೊಳದ ಸ್ವಾಮೀಜಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಆರಂಭಿಸುವ ಮೂಲಕ ಸಮಾಜಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಹೊಸ ತಲೆಮಾರಿನ ಭವಿಷ್ಯ ರೂಪಿಸುವುದರ ಜೊತೆಗೆ ಸಮಾಜದ ಒಳಿತಿಗಾಗಿ ಮಠಗಳು ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿವೆ. ಇಂತಹ ಶಿಕ್ಷಣ ಸಂಸ್ಥೆಗಳ ಮೂಲಕ ಗುಣಮಟ್ಟದ ಆರೋಗ್ಯ ಸೇವೆ ದೊರೆಯುವುದರ ಜೊತೆಗೆ, ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರದ ಮೇಲಿನ ಹೊಣೆಯೂ ಒಂದಷ್ಟು ಕಡಿಮೆಯಾಗಲಿದೆ. ಈ ಮೂಲಕ ಮಠವು ಸರ್ಕಾರದ ಸೇವಾ ಕಾರ್ಯಗಳಿಗೆ ಸಹಕಾರ ನೀಡಿದಂತಾಗಿದೆ ಎಂದು ಹೇಳಿದರು.

**ಸೇವಾ ಮನೋಭಾವ ರೂಪುಗೊಳ್ಳಲಿ**

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಶ್ರವಣಬೆಳಗೊಳ ಮಠದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾರ್ಚಾರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, ಶಿಕ್ಷಣ ಸಂಸ್ಥೆಗಳು

» ನಾಲ್ಕನೇ ಪುಟದಲ್ಲಿ

### ಈ ವರ್ಷ ಬಿಎಸ್ಸಿ, ಎಂಎಸ್ಸಿ ನರ್ಸಿಂಗ್ ಅನುಮತಿ

ಸ್ವಸ್ತಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯ ಮಹದಾಸೆಯಂತೆ ಜಿಎನ್‌ಎಂ ನರ್ಸಿಂಗ್ ನಡೆಯುತ್ತಿತ್ತು. ಅದರ ಮುಂದುವರೆದ ಭಾಗವಾಗಿ ಈ ವರ್ಷ ಬಿಎಸ್ಸಿ ನರ್ಸಿಂಗ್, ಎಂಎಸ್ಸಿ ನರ್ಸಿಂಗ್, ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಅನುಮತಿ ಸಿಕ್ಕಿದೆ. ಈ ಉದ್ದೇಶದಿಂದ ಬೃಹತ್ ಕಟ್ಟಣ ನಿರ್ಮಾಣ ಕಾರ್ಯಕ್ಕೆ ಮುಂದಾಗಿದ್ದೇವೆ. ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಎರಡು ವರ್ಷದಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ಸ್ವಾಮೀಜಿ ಹೇಳಿದರು.



# ಬಿಸಿಲಿನಿಂದ ಬಂದು ತಕ್ಷಣ ಎಸಿ ಆನ್ ಮಾಡಬಾರದೇಕೆ?

ಈಗ ಮಳೆಗಾಲವಾದರೂ ಬಿಸಿಲು ಚುರುಗುಟ್ಟುತ್ತಿದೆ. ಬೇಸಿಗೆ ಕಾಲದ ಬಿಸಿಲಿಗಿಂತಲೂ ತೀಕ್ಷ್ಣವಾದ ಬಿಸಿಲು, ಅದರ ಜೊತೆಗೆ ಸೆಖೆಯಿಂದ ಕರ್ನಾಟಕ ರಾಜ್ಯದಾದ್ಯಂತ ಜನರು ಬವಣೆ ಪಡುತ್ತಿದ್ದಾರೆ. ನೆಟ್ಟ ಬೆಳೆ ಕಟಾವಿಗೆ ಬರುತ್ತಿಲ್ಲ, ನೀರಿನ ಕೊರತೆಯಿಂದ ಹಾಳಾಗಿ ಹೋಗುತ್ತಿದೆ. ಬರ ಪೀಡಿತ ಪ್ರದೇಶ ಎಂದು ಘೋಷಣೆಗಾಗಿ ಹಲವಾರು ಜಿಲ್ಲೆಗಳು ಕಾಯುತ್ತಿವೆ. ಈ ವರ್ಷ ಮೊದಲಬಾರಿಗೆ ಎಂಬಂತೆ ಕರಾವಳಿ ಕರ್ನಾಟಕದ ಜಿಲ್ಲೆಗಳೂ ಬರ ಪೀಡಿತ ಪ್ರದೇಶವಾಗಲು ದಿನಗಣನೆ ಮಾಡುತ್ತಿದೆ. ಹಿಂದಿನ ಇಷ್ಟು ವರ್ಷಗಳಲ್ಲಿ ಕರಾವಳಿ ಕರ್ನಾಟಕದಲ್ಲಿ ತಕ್ಕ ಮಟ್ಟಿನ ಮಳೆಯಾಗುತ್ತಿತ್ತು. ಆದರೆ ಈ ವರ್ಷ ಹವಾಮಾನ ಕೈಕೊಟ್ಟಿದೆ.

ಈ ಹವಾಮಾನ ಕೈಕೊಟ್ಟಿರುವುದರಿಂದ ಎಸಿ ಕಂಪೆನಿಯವರಿಗೆ ಸಖತ್ ಲಾಭವಾಗಿದೆ. ಬಿಡಿ ಭಾಗಗಳ ಬೆಲೆ ಅಧಿಕವಾದ ಕಾರಣ ಮುಂದಿನ ತಿಂಗಳಿಂದ ಹವಾನಿಯಂತ್ರಕದ (ಎಸಿ) ಬೆಲೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಲಿದೆ ಎನ್ನುವ ಲೆಕ್ಕಾಚಾರ ಆಗುತ್ತಿದೆ. ನೀವು ಈ ಬಿಸಿಲಿಗೆ ಮನೆಯಿಂದ ಹೊರಗೆ ಹೋಗಿ ಸ್ವಲ್ಪ ಸಮಯದ ನಂತರ ಹಿಂದೆ ಬಂದು ತಕ್ಷಣದ ಮನೆಯ ಎಸಿಯನ್ನು ಚಲಾಯಿಸಿದರೆ ಅದು ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನುತ್ತಿದೆ ಒಂದು ಸಂಶೋಧನೆ. ಬನ್ನಿ, ಅದರ ಬಗ್ಗೆ ತಿಳಿದುಕೊಳ್ಳೋಣ.

ಈ ಬಿಸಿಲಿನಲ್ಲಿ ಮಧ್ಯಾಹ್ನ ವೇಳೆ ಹೊರಗೆ ಓಡಾಡುವುದೇ ಕಷ್ಟಕರ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಜನರು ತಂಪು ಪಾನೀಯಗಳು, ಜ್ಯೂಸ್ ಹಾಗೂ ಎಳನೀರಿನ ಮೊರೆ ಹೋಗುತ್ತಿದ್ದಾರೆ. ಅದರಲ್ಲೂ ಹೊರಗಿನಿಂದ ಮನೆಗೆ ಬಂದ ತಕ್ಷಣ ಸೆಖೆ ತಾಳಲಾರದೇ ಹಲವರು ಫ್ಯಾನ್, ಕೂಲರ್ ಅಥವಾ ಎಸಿ ಆನ್ ಮಾಡಿ ಅದರ ಎದುರು ಕುಳಿತುಕೊಳ್ಳುವುದು ಸಾಮಾನ್ಯವಾಗಿದೆ. ಆದರೆ ಆರೋಗ್ಯ ತಜ್ಞರ ಪ್ರಕಾರ, ಬಿಸಿಲಿನಿಂದ ಬಂದ ಕೂಡಲೇ ಎಸಿ ಮುಂದೆ ಕುಳಿತುಕೊಳ್ಳುವುದು ದೇಹಕ್ಕೆ ಗಂಭೀರ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ. ಮಾನವ ದೇಹ ತನ್ನ ತಾಪಮಾನವನ್ನು ಸಮತೋಲನದಲ್ಲಿಡಲು ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ. ಬಿಸಿಲಿನಲ್ಲಿ ಹೆಚ್ಚು ಸಮಯ ಕಳೆದಾಗ ದೇಹದ ಉಷ್ಣಾಂಶ ಹೆಚ್ಚಾಗುತ್ತದೆ. ಈ ವೇಳೆ ದೇಹದಿಂದ ಬೆವರು ಹೊರಬಂದು ದೇಹವನ್ನು ತಂಪಾಗಿಡುವ ಪ್ರಯತ್ನ ಮಾಡುತ್ತದೆ. ಆದರೆ ಇಂತಹ ಸಮಯದಲ್ಲಿ ಹಠಾತ್ ತಣ್ಣನೆಯ ಎಸಿಗೆ ಮೈ ಒಡ್ಡುವುದರಿಂದ ದೇಹದ ತಾಪಮಾನದಲ್ಲಿ ಏಕಾಏಕಿ ಬದಲಾವಣೆ ಉಂಟಾಗುತ್ತದೆ. ಇದು ದೇಹದ ಸಹಜ ಪ್ರಕ್ರಿಯೆಗೆ ಅಡ್ಡಿಪಡಿಸಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ವಿಶೇಷವಾಗಿ ಬಿಸಿಲಿನಿಂದ ಬಂದ ತಕ್ಷಣ ಎಸಿ ಮುಂದೆ ಕುಳಿತುಕೊಳ್ಳುವುದರಿಂದ ಶೀತ, ತಲೆನೋವು, ಗಂಟಲು ನೋವು ಹಾಗೂ ದೇಹದ ದಣಿವು ಹೆಚ್ಚಾಗುವ ಸಾಧ್ಯತೆ ಇದೆ. ಕೆಲವರಲ್ಲಿ ಸ್ನಾಯು ನೋವು ಹಾಗೂ ಜ್ವರದಂತಹ ಲಕ್ಷಣಗಳು ಸಹ ಕಾಣಿಸಿಕೊಳ್ಳಬಹುದು. ದೇಹ ಹೆಚ್ಚು ಬಿಸಿಯಾಗಿರುವ ಸಂದರ್ಭದಲ್ಲಿ ತಣ್ಣನೆಯ ಗಾಳಿ ತಾಗುವುದರಿಂದ ರಕ್ತನಾಳಗಳಲ್ಲಿ ಹಠಾತ್ ಬದಲಾವಣೆ ಉಂಟಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆಸ್ತಮಾ, ಅಲರ್ಜಿ ಅಥವಾ ಉಸಿರಾಟದ ಸಮಸ್ಯೆ ಇರುವವರಿಗೆ ಇದು ಇನ್ನಷ್ಟು ಅಪಾಯಕಾರಿಯಾಗಿದೆ. ಎಸಿ ಗಾಳಿಗೆ ಹಠಾತ್ ಒಳಗಾದರೆ ಉಸಿರಾಟದ ತೊಂದರೆ ಹೆಚ್ಚಾಗುವ ಸಾಧ್ಯತೆ ಇದೆ. ಜೊತೆಗೆ ರಾತ್ರಿಯಿಡೀ ಎಸಿ ಬಳಕೆ ಮಾಡುವವರಲ್ಲಿ ಒಣ ಕಣ್ಣು, ಒಣ ಮೂಗು ಹಾಗೂ ಗಂಟಲು ಒಣಗುವ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ.



ಆರೋಗ್ಯ ತಜ್ಞರ ಸಲಹೆಯಂತೆ, ಹೊರಗಿನಿಂದ ಮನೆಗೆ ಬಂದ ತಕ್ಷಣ ನೇರವಾಗಿ ಎಸಿ ಕೋಣೆಗೆ ಹೋಗುವುದನ್ನು ತಪ್ಪಿಸಬೇಕು. ಮೊದಲು ಸಾಮಾನ್ಯ ತಾಪಮಾನ ಇರುವ ಸ್ಥಳದಲ್ಲಿ 10 ರಿಂದ 15 ನಿಮಿಷ ವಿಶ್ರಾಂತಿ ಪಡೆಯುವುದು ಉತ್ತಮ. ಮುಖ, ಕೈ ಹಾಗೂ ಕಾಲುಗಳನ್ನು ತಣ್ಣೀರು ಬಳಸಿ ತೊಳೆಯುವುದರಿಂದ ದೇಹದ ಉಷ್ಣಾಂಶ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ದೇಹದ ಬೆವರು ಕಡಿಮೆಯಾದ ನಂತರವೇ ಎಸಿ ಬಳಸುವುದು ಆರೋಗ್ಯದ ದೃಷ್ಟಿಯಿಂದ ಸುರಕ್ಷಿತ ಎಂದು ಹೇಳಲಾಗಿದೆ. ಎಸಿ ಬಳಸುವಾಗಲೂ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದು ಅಗತ್ಯವಾಗಿದೆ. ಎಸಿಯ ತಾಪಮಾನವನ್ನು ಅತಿಯಾಗಿ ಕಡಿಮೆ ಮಾಡದೇ 24 ರಿಂದ 26 ಡಿಗ್ರಿ ಸೆಲ್ಸಿಯಸ್ ನಡುವೆಯೇ ಇಡುವುದು ಉತ್ತಮ ಎಂದು ತಜ್ಞರು ಸಲಹೆ ನೀಡಿದ್ದಾರೆ. ಇದರಿಂದ ದೇಹಕ್ಕೆ ಅತಿಯಾದ ತಂಪು ತಾಗುವುದಿಲ್ಲ ಹಾಗೂ ಆರೋಗ್ಯ ಸಮಸ್ಯೆಗಳ ಅಪಾಯ ಕಡಿಮೆಯಾಗುತ್ತದೆ. ಇದರ ಜೊತೆಗೆ ಎಸಿ ಜೊತೆ ಫ್ಯಾನ್ ಬಳಸುವುದರಿಂದ ಕೋಣೆಯೊಳಗೆ ತಂಪು ಗಾಳಿ ಸಮವಾಗಿ ಈ ಹರಡುತ್ತದೆ. ಇದರಿಂದ ಎಸಿಯ ಮೇಲಿನ ಒತ್ತಡ ಕಡಿಮೆಯಾಗುವುದರ ಜೊತೆಗೆ ವಿದ್ಯುತ್ ಉಳಿತಾಯವೂ ಆಗುತ್ತದೆ. ಬಾಗಿಲು ಹಾಗೂ ಕಿಟಕಿಗಳನ್ನು ಮುಚ್ಚಿಡುವುದು ಮತ್ತು ಮನೆಯೊಳಗೆ ಒಳಾಂಗಣ ಸಸ್ಯಗಳನ್ನು ಬೆಳೆಸುವುದರಿಂದಲೂ ಮನೆ ತಂಪಾಗಿರಲು ಸಹಾಯವಾಗುತ್ತದೆ. ಬೇಸಿಗೆಯಲ್ಲಿ ಎಸಿ ಬಳಕೆ ಹಲವಾರು ಬಾರಿ ಅನಿವಾರ್ಯವಾದರೂ ಅದನ್ನು ಸರಿಯಾದ ರೀತಿಯಲ್ಲಿ ಬಳಸುವುದು ಬಹಳ ಮುಖ್ಯವಾಗಿದೆ. ಬಿಸಿಲಿನಿಂದ ಬಂದ ತಕ್ಷಣ ಎಸಿ ಮುಂದೆ ಕುಳಿತುಕೊಳ್ಳುವ ಅಭ್ಯಾಸ ಆರೋಗ್ಯಕ್ಕೆ ಹಾನಿಕಾರಕವಾಗಬಹುದಾದ್ದರಿಂದ ಸ್ವಲ್ಪ ಸಮಯ ವಿಶ್ರಾಂತಿ ಪಡೆದ ನಂತರವೇ ಎಸಿ ಬಳಸುವುದು ಉತ್ತಮ.

**– ಕೆ.ಪಿ.ಅಶ್ವಿನ್** ರಾವ್







# ಸಾಧಿಸುವ ಛಲ

ಟಾಮ್ ಡೆವಾನ್ ಪೋರ್ಟ್ ಮತ್ತು ಸೀನ್ ಸ್ವಾರ್ನರ್ ಈ ಇಬ್ಬರು ಗೆಳೆಯರು ಸಾಹಸಿಗಳು. ಆದರೆ, ಈ ಇಬ್ಬರೂ ಸಾಹಸಿಗಳು ಕ್ಯಾನ್ಸರ್ ಪೀಡಿತರಾದವರು. ಈ ಇಬ್ಬರಿಗೂ ತಮ್ಮ ಕಾಯಿಲೆಯ ಬಗ್ಗೆ ಸಂಪೂರ್ಣ ಅರಿವು ಇತ್ತು. ಇವರಿಗೆ ತಮ್ಮ ಖಾಯಿಲೆಗಿಂತ ಹೆಚ್ಚಾಗಿ ಏನಾದರೊಂದು ಗುರಿಸಾಧನೆ ಮಾಡುವ ಬಗ್ಗೆ ಹೆಚ್ಚು ಆಸ್ಥೆ ಇತ್ತು. ಯಾವತ್ತೋ ಒಂದು ದಿನ ಸಾವು ಬರುತ್ತದೆ, ಸಾಯುವುದರೊಳಗಾಗಿ ತಮ್ಮ ಗುರಿಯನ್ನು ಮುಟ್ಟಲೇ ಬೇಕೆಂಬ ಛಲ ಇತ್ತು, ಹೀಗಾಗಿ ತಮ್ಮ ಜೀವನವನ್ನೇ ಒತ್ತೆಯಿಟ್ಟು ಒಂದು ದಿನ ತಮ್ಮ ಗುರಿಸಾಧನೆಯತ್ತ ಮುಖ ಮಾಡಿದರು, ಹಾಗೆಂದು ಬದುಕುವ ಆಸೆ ಬಿಟ್ಟವರಲ್ಲ.

ಸಾವಿನ ಬಾಗಿಲನ್ನು ಇನ್ನೇನು ತಟ್ಟುವವರಿದ್ದೇವೆಂದು ತಿಳಿದಿದ್ದರೂ ಸಹಾ ಟಾಮ್ 1200 ಕಿ ಮೀ ದೂರದ ಟ್ರೆಕ್ಕಿಂಗ್ ಮಾಡಿ, 53 ದಿನಗಳ ಕಾಲ ದಕ್ಷಿಣಧ್ರುವದ ಉಸಿರುಕಟ್ಟುವ ವಾತಾವರಣದಲ್ಲಿ ಬದುಕನ್ನು ಸವೆಸಿದ. ಇವನ ಉತ್ಸಾಹ ಇಲ್ಲಿಗೆ ನಿಲ್ಲಲಿಲ್ಲ. ಆ ಸುಂದರ ತೀರದ ಪ್ರದೇಶದಲ್ಲಿ ನಿಂತು ಗಾಳಿಪಟವನ್ನು ಸಂಭ್ರಮದಿಂದ ಹಾರಿಸುತ್ತ ಆನಂದದಲ್ಲಿ ಕಾಲ ಕಳೆದಂತಹ ಟಾಮ್ ಹೇಳುತ್ತಾನೆ, ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಇರಬೇಕು. ರಿಸ್ಕ್ ತೆಗೆದುಕೊಳ್ಳಲು ನಾವೇನಾದರೂ ಅಶಕ್ತರಾದರೆ ಬದುಕಿನಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ.

ಸೀನ್ ಸ್ವಾರ್ನರ್ ಎವರೆಸ್ಟ್ ಪರ್ವತದ ಜೊತೆಗೆ ಅದೆಷ್ಟೋ ಪರ್ವತಗಳನ್ನು ಅದೆಷ್ಟೋ ಬಾರಿ ಹತ್ತಿ ಇಳಿದಿದ್ದಾನೆ. ಅವನು ತನ್ನ ಅನುಭವದಲ್ಲಿ ಹೇಳುತ್ತಾನೆ ಮುಂದೆ ಎಂದೋ ಸಂಭವಿಸುವ ಸಾವಿಗೆ ಅಂಜಿ, ಜೋಲುಮೋರೆ ಹಾಕಿಕೊಂಡು ಇಂದು ಯಾಕೆ ಸುಮ್ಮನೆ ಕೂಡುಬೇಕು? ಇದರ ಬದಲು ಜೀವನದಲ್ಲಿ ಹೊಸತು ಏನನ್ನಾದರೂ ಸಾಧಿಸುವ ಛಲಹೊಂದ ಬೇಕು. ನಾವು ಕಳೆಯುವ ಪ್ರತಿ ಕ್ಷಣದಲ್ಲಿ ಹೊಸತುಗಳ ನಿರೀಕ್ಷೆಯಲ್ಲಿರಬೇಕು. ಅದೇ ನಿಜದಲ್ಲಿ ಸುಂದರವಾದ ಜೀವನ.

ಹೌದು. ಈ ಇಬ್ಬರೂ ಸಾಧಕರು ತೋರಿಸಿದ ಧೈರ್ಯ ಮತ್ತು ಸಾಹಸ ನಮ್ಮೊಳಗೂ ಮನೆಮಾಡಿದರೆ, ಉತ್ಸಾಹದ ಜೊತೆಗೆ ಧೈರ್ಯವೂ ಬರುತ್ತದೆ. ಆಗ ಎಂದೋ ಬರುವ ಸಾವಿಗೆ ಅಂಜಿ ಕೂರಬೇಕಾದ ಪ್ರಮೇಯವಿರುವುದಿಲ್ಲ.

**– ಪ್ರಕಾಶ್** ನರಸಿಂಹಯ್ಯ

# ಅವಳ ಬದುಕು ಅವಳದಲ್ಲವೇ!!?

ನಿರಂಜನರು ಬರೆದ ಸಾಮಾಜಿಕ ಕಾಳಜಿಯ ಒಂದು ಕಥೆ ಕೊನೆಯ ಗಿರಾಕಿ. ಈ ಕಥೆಯ ನಾಯಕಿ ಕಾಣಿ. ಈಕೆ ದಿಕ್ಕು ದೆಸೆ ಇಲ್ಲದ ಬಡ ಹೆಣ್ಣುಮಗಳು. ಈಕೆಯನ್ನು ಈ ಸಮಾಜ ಹೇಗೆ ಒಬ್ಬ ಮನುಷ್ಯಳಂತೆ ನೋಡದೆ, ಹೇಗೆ ಮಾರಲು, ಕೊಳ್ಳಲು ಇರುವ ವಸ್ತುವಾಗಿ ಕಾಣುತ್ತದೆ ಎಂಬುದನ್ನು ನಾವು ಕಾಣಬಹುದು. ಈ ಕಾಣಿಯ ಪರಿಸ್ಥಿತಿಯು ಸಮಾಜದಲ್ಲಿರುವ ಅದೆಷ್ಟೋ ಹೆಣ್ಣುಮಕ್ಕಳ ಪರಿಸ್ಥಿತಿಯಾಗಿದೆ.

ಕಾಣಿಯ ಅಸ್ತಿತ್ವವನ್ನು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಪಿತೃಪ್ರಧಾನ ಸಮಾಜ ವ್ಯವಸ್ಥೆ ಅವಳ ಮೇಲೆ ನಿಯಂತ್ರಣ ಇಟ್ಟುಕೊಂಡು, ಆಕೆಯನ್ನು ಅವರಿಗೆ ಬೇಕಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತದೆ. ಆಕೆಯ ಸ್ವಾತಂತ್ರ್ಯದ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. ಹಾಗೆಯೇ ಆಕೆಗೆ ತನಗಿಷ್ಟ ಬಂದ ಹಾಗೆ ಬದುಕಲು ಅವಕಾಶ ಇರುವುದಿಲ್ಲ.

ಈ ಒಂದು ಕಥೆಯಲ್ಲಿ ಕೊನೆಯ ಗಿರಾಕಿಯಾಗಿ ಕಾಣಿ ಸಿಗುವ ಗಿಡುಗ, ಆಕೆ ಸತ್ತ ಮೇಲೆ ಆಕೆಯನ್ನು ಕುಕ್ಕುತ್ತದೆ. ಆದರೆ ಜನರು ಆಕೆ ಬದುಕಿದ್ದಾಗಲೇ ಆಕೆಯನ್ನು ಕುಕ್ಕಿ ಕುಕ್ಕಿ, ಅವಳ ಸಾವಿಗೆ ಕಾರಣವಾಗಿ, ಗಿಡುಗಕ್ಕಿಂತಲೂ ಹೆಚ್ಚು ಕ್ರೂರವಾಗಿ ಕಾಣುತ್ತಾರೆ.

ಈ ಪಿತೃಪ್ರಧಾನ ಸಮಾಜದಲ್ಲಿ ಇಂದಿಗೂ ಇಂತಹ ಪರಿಸ್ಥಿತಿಗಳನ್ನು ನಾವು ಕಾಣಬಹುದು. ಇಂದು ಮಹಿಳಾ ಸಬಲೀಕರಣ ಮುಂದುವರಿಯುತ್ತಿರಬಹುದು. ಆದರೆ ಹಾಗೆಂದು ಹೆಣ್ಣಿನ ಮೇಲೆ ದೌರ್ಜನ್ಯ, ಶೋಷಣೆ ಇಂದಿಗೂ ನಿಂತಿಲ್ಲ. ಬಾಯಿ ಬಿಟ್ಟು ಹೆಣ್ಣುಮಗು ಹೇಳದೇ ಇರಬಹುದು; ಆದರೆ ಆಕೆ ಒಳಗೊಳಗೆ ಕೊರಗುತ್ತಾ, ಯಾರಲ್ಲೂ ಹೇಳಲು ಆಗದೆ ಬದುಕಿದ್ದು ಸಾಯುತ್ತಿರುತ್ತಾಳೆ. ಈ ಕಥೆಯಲ್ಲಿ ಕಾಣಿ ಮೂಕಿ ಇದು ಸಮಾಜದಲ್ಲಿ ದೌರ್ಜನ್ಯ ಮತ್ತು ಶೋಷಣೆಗೆ ಒಳಗಾದ ಹೆಣ್ಣುಮಗಳು ಬಾಯಿ ಇದ್ದರೂ ತನ್ನ ನೋವುಗಳನ್ನು ಹೇಳಿಕೊಳ್ಳಲಾಗದೆ ಹೇಗೆ ಮೂಕಿಯಾಗಿಯೇ ಇರುತ್ತಾಳೆ ಎಂಬುವುದರ ಸಂಕೇತವಾಗಿ ನಾವು ಕಾಣಬಹುದಾಗಿದೆ.

ಹೆಣ್ಣಿನ ಭವಿಷ್ಯ ಎಂದರೆ ಏನು? ಈ ಒಂದು ಕಥೆಯಲ್ಲಿ ಕಾಣಿಗೆ ಯಾವುದೇ ಭವಿಷ್ಯ ಇಲ್ಲ. ಅವಳ ಕನಸು ನುಚ್ಚುನೂರಾಗುತ್ತದೆ. ಅವಳ ಬದುಕಿನ ಪ್ರತಿಯೊಂದು ಹಂತದಲ್ಲೂ ಯಾರಾದರೂ ಅವಳ ಮೇಲೆ ಅಧಿಕಾರ ಸಾಧಿಸುತ್ತಲೇ ಇರುತ್ತಾರೆ. ಒಂದು ಹೆಣ್ಣು ತನಗಿಷ್ಟ ಬಂದಂತೆ ಬದುಕಲು, ಜೀವನ ಕಟ್ಟಿಕೊಳ್ಳಲು ಸಾಧ್ಯವೇ? ಎನ್ನುವ ಪ್ರಶ್ನೆಗೆ ಕಾಣಿಯ ಪಾತ್ರವೇ ಉದಾಹರಣೆಯನ್ನು ನೀಡುತ್ತದೆ.

ಟಿಪಿಕಲ್ ಸಾಂಪ್ರದಾಯಿಕ ಕುಟುಂಬಗಳಲ್ಲಿ ನಾವು ಹೇಗೆ ಒಂದು ಹೆಣ್ಣಿನ ಬದುಕಿನ ಎಲ್ಲಾ ವಿಚಾರಗಳಲ್ಲಿ ಆಕೆಯ ಮನೆಯವರು, ಕುಟುಂಬದವರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೋಡಬಹುದು. ಮದುವೆಯ ವಿಚಾರವನ್ನೇ ನೋಡಿದರೂ, ಅವಳಿಗೆ ಇಷ್ಟವಿಲ್ಲದಿದ್ದರೂ ಮನೆಯವರ ಒತ್ತಾಯಕ್ಕೆ ಬೇರೆ ದಾರಿಯಿಲ್ಲದೆ ಮದುವೆಯಾಗುವುದು ಮುಂತಾದವುಗಳನ್ನು ಕಾಣಬಹುದು.

ಒಂದು ಹೆಣ್ಣುಮಗು ತನಗಿಷ್ಟ ಬಂದಂತೆ ಇದ್ದು, ಭವಿಷ್ಯ ಕಟ್ಟಿಕೊಳ್ಳಲು ನೋಡಿದರೆ, ಅವಳನ್ನು ಗಂಡುಬೀರಿ ಎಂದು ಹಗುರವಾಗಿ ಮಾತನಾಡುತ್ತಾರೆ. ಯಾಕೆ ಈ ಸಮಾಜ ಹೀಗಿದೆ? ಒಂದು ಕಡೆ ಮಹಿಳಾ ಸಬಲೀಕರಣ ಆಗುತ್ತಿದ್ದರೂ, ಇನ್ನೊಂದು ಕಡೆ ಇಂದಿಗೂ ಇಂತಹ ಮನಸ್ಥಿತಿ ಪ್ರಚಲಿತದಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು.





> ಗಾಂಧಿಯ ಅಹಿಂಸೆ ಸತ್ಯಾಗ್ರಹದಿಂದ ಸ್ವಾತಂತ್ರ್ಯ ಬಂತೋ ಅಥವಾ ಗಾಂಧಿಯ ಮಂಚವಾಡು ಬುದ್ಧಿಯಿಂದ ಸ್ವಾತಂತ್ರ್ಯ ಬಂತೋ ಎಂಬ ಜಿಜ್ಞಾಸೆಯಲ್ಲಿ ಅವರು ಜೀವಂತ. ಭಾರತವನ್ನು ಹೋಳು ಮಾಡಿ ಪಾಕಿಸ್ತಾನವೆಂಬ ಮುಸ್ಲಿಂ ದೇಶವನ್ನಾಗಿಸಿ, ಮಿಕ್ಕ ಭಾರತವನ್ನು ಸೆಕ್ಯುಲರ್ ದೇಶವಾಗಿಸಿದ ಮಹಾತ್ಮ ಎಂದೆಂದಿಗೂ ನಮ್ಮ ಚರ್ಚೆಯಲ್ಲಿ ಜೀವಂತ.

# ಗಾಂಧಿಯ ಬ್ರಹ್ಮಚರ್ಯ ಪ್ರಯೋಗ ಪ್ರಶ್ನಾತೀತವೇ?

ಪದಸಾಗರ

ಗಾಂಧಿ ಜಯಂತಿಗೆ ಇನ್ನೊಂದು ವಾರವೂ ಬಾಕಿ ಇಲ್ಲ. ಬದುಕಿದ್ದಿದ್ದರೆ ನೂರಾ ಐವತ್ತೇಳು ವರ್ಷ ಆಗಿರುತ್ತಿತ್ತು ಅಂದುಕೊಳ್ಳುತ್ತಿದ್ದೆ. ಹಾಗಾದರೆ ಗಾಂಧಿ ಬದುಕಿಲ್ಲವೇ? ಎಂಬ ಪ್ರಶ್ನೆ ಕೂಡ ಹಾದು ಹೋಯ್ತು. ನೋಟಿನಿಂದ ವೋಟಿನ ತನಕ ಗಾಂಧಿ ಇಂದಿಗೂ ಜೀವಂತ. ಗುಂಡಿನೇಟಿನಿಂದ ಗುಂಡುನಿಷೇಧದ ತನಕ ಗಾಂಧಿ ಇನ್ನೂ ಜೀವಂತ. ಗಾಂಧಿ ನಿಜವಾಗ್ಲೂ ನಾವೆಲ್ಲ ಅಂದು ಕೊಂಡಷ್ಟು ಗಾಂಧಿಯೋ ಅಥವಾ ಅವರನ್ನು ಪಠ್ಯಗಳಲ್ಲಿ, ಭಾಷಣಗಳಲ್ಲಿ ಗಾಂಧಿಯನ್ನಾಗಿಸಲಾಯಿತೋ ಎಂಬ ಚರ್ಚೆಯ ತನಕ ಅವರು ಜೀವಂತ.

ಗಾಂಧಿಯ ಅಹಿಂಸೆ ಸತ್ಯಾಗ್ರಹದಿಂದ ಸ್ವಾತಂತ್ರ್ಯ ಬಂತೋ ಅಥವಾ ಗಾಂಧಿಯ ಮಂಚವಾಡು ಬುದ್ಧಿಯಿಂದ ಸ್ವಾತಂತ್ರ್ಯ ಬಂತೋ ಎಂಬ ಜಿಜ್ಞಾಸೆಯಲ್ಲಿ ಅವರು ಜೀವಂತ. ಭಾರತವನ್ನು ಹೋಳು ಮಾಡಿ ಪಾಕಿಸ್ತಾನವೆಂಬ ಮುಸ್ಲಿಂ ದೇಶವನ್ನಾಗಿಸಿ, ಮಿಕ್ಕ ಭಾರತವನ್ನು ಸೆಕ್ಯುಲರ್ ದೇಶವಾಗಿಸಿದ ಮಹಾತ್ಮ ಎಂದೆಂದಿಗೂ ನಮ್ಮ ಚರ್ಚೆಯಲ್ಲಿ ಜೀವಂತ.

ಗಾಂಧಿಯ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂಥ್ ಎಂಬ ಪುಸ್ತಕದಲ್ಲಿ ಟ್ರೂಥ್ ಎಂಬುದು ಎಷ್ಟಿತ್ತೋ ಗೊತ್ತಿಲ್ಲ. ಚಿಕ್ಕವನಿದ್ದಾಗ ಏನೋ ಸುಳ್ಳು ಹೇಳಿ ಸಿಕ್ಕಿಕೊಂಡಿದ್ದೆ. ಆಗ ಅಪ್ಪ ಬಯ್ಯಲಿಲ್ಲ. ತುಂಬ ಹೊದ್ದುಕೊಂಡು ಮಲಗಿಬಿಟ್ಟರು. ಅವತ್ತಿಂದ ಸುಳ್ಳು ಹೇಳಲಿಲ್ಲ ಎಂಬ ಗಾಂಧಿ ಮಾತನ್ನು ನಾವೆಲ್ಲ ನಂಬಿದ್ದೆವು. ಗಾಂಧಿ ಅಂದಿನಿಂದ ಸುಳ್ಳೇ ಹೇಳಲಿಲ್ಲವೇ? ಬಲ್ಲವರಾರು? ಗಾಂಧಿಯ ಬದುಕು ವಿರೋಧಾಭಾಸಗಳ ಮಿಶ್ರಣ, ವಿವಾದಗಳ ಗೋದಾಮು. ಆದರೆ ಇತಿಹಾಸಕಾರರು ಮಹಾತ್ಮನನ್ನಾಗಿಸಿ, ಹುತಾತ್ಮರನ್ನಾಗಿಸಿ ಅವರನ್ನು ಪ್ರಶ್ನಾತೀತರನ್ನಾಗಿಸಿದರು.

ಗಾಂಧಿ ಎಂಬ ಚರ್ಚಾಸ್ಪದ ವ್ಯಕ್ತಿತ್ವದ ಬಗ್ಗೆ ಇತ್ತೀಚೆಗೊಂದು ವಿಡಿಯೋ ನೋಡಿದೆ. ಅದರಲ್ಲಿ ನಿರ್ಮಲ್ ಕುಮಾರ್ ಬೋಸ್ ಬರೆದ (ನಿಷೇಧಿತ ಅಥವಾ ವಿವಾದಿತ?) ಪುಸ್ತಕ ಮೈ ಡೇಸ್ ವಿಥ್ ಗಾಂಧಿಯಲ್ಲಿರುವ ಕೆಲವು ಪುಟಗಳ ಬಗ್ಗೆ ವಿವರಣೆ ಇತ್ತು. ಬ್ರಹ್ಮಚರ್ಯದೊಂದಿಗಿನ ಗಾಂಧಿಯವರ ಪ್ರಯೋಗಗಳ ಬಗೆಗಿನ ಆ ವಿಡಿಯೋ ನಿಜಕ್ಕೂ ಕುತೂಹಲ ಕೆರಳಿಸುವಂತಿತ್ತು.

ಹೌದು.. ಇತಿಹಾಸದಲ್ಲಿ ಕೆಲವು ವ್ಯಕ್ತಿಗಳಿರುತ್ತಾರೆ. ಅವರನ್ನು ನಾವು ಕೇವಲ ವ್ಯಕ್ತಿಗಳಾಗಿ ನೋಡುವುದಿಲ್ಲ; ಯುಗಪುರುಷರಂತೆ ನೋಡುತ್ತೇವೆ. ಗಾಂಧಿಯೂ ಅಂಥವರಲ್ಲಬ್ಬರು. ಸ್ವಾತಂತ್ರ್ಯ ಹೋರಾಟ, ಅಹಿಂಸೆ, ಸತ್ಯಾಗ್ರಹ, ಸರಳತೆ, ಸ್ವಾವಲಂಬನೆ, ನೈತಿಕತೆ– ಇವೆಲ್ಲವನ್ನೂ ನೆನಪಿಸಿದಾಗ ಗಾಂಧಿಯ ಮುಖ ನಮ್ಮ ಕಣ್ಣ ಮುಂದೆ ಬರುತ್ತದೆ. ಆದರೆ ಇತಿಹಾಸದ ದೊಡ್ಡ ವ್ಯಕ್ತಿಗಳ ಬದುಕು ಅಷ್ಟು ಸಿಂಪಗಿ ಇರೋದಿಲ್ಲ ಎಂಬುದಕ್ಕೆ ಎನ್.ಕೆ ಬೋಸ್ ಅವರ ಪುಸ್ತಕದ ಆ ಪುಟಗಳು ಸಾಕ್ಷಿ. ಹಾಗಂತ ಎನ್. ಕೆ ಬೋಸ್ ಅವರ ಪುಸ್ತಕದ ಉದ್ದೇಶ ಗಾಂಧಿಯ ಮಾನಹಾನಿ ಮಾಡುವುದಾಗಲೀ, ಅವರ ಸಾಧನೆ ಮತ್ತು ಕೊಡುಗೆಗಳನ್ನು ಅಳಿಸುವುದಾಗಲೀ ಅಲ್ಲ.

ಅವರ ಇನ್ನೊಂದು ಮುಖವನ್ನು ಪರಿಚಯಿಸುವ ಪ್ರಯತ್ನ. ಪ್ರತ್ಯಕ್ಷವಾಗಿ ಕಂಡದ್ದನ್ನು ದಾಖಲಿಸುವ ಪ್ರಾಮಾಣಿಕ ಕೆಲಸ. ಎನ್. ಕೆ ಬೋಸ್ ಅಲ್ಲದೆ ಇನ್ಯಾರೂ ಅದನ್ನು ಬರೆಯಲು ಸಾಧ್ಯವಿರಲಿಲ್ಲ. ಏಕೆಂದರೆ ಅವರು ಗಾಂಧಿಯನ್ನು ಹತ್ತಿರದಿಂದ ಕಂಡಿದ್ದ ಆಪ್ತ ಕಾರ್ಯದರ್ಶಿ. ಗಾಂಧಿಯ ಜೀವನದ ಅಂತಿಮ ವರ್ಷಗಳಲ್ಲಿ ನಡೆದ ಬ್ರಹ್ಮಚರ್ಯ ಪ್ರಯೋಗಗಳು ಅಂಥ ಒಂದು ಸಂಕೀರ್ಣ ಅಧ್ಯಾಯ ಎನ್ನುತ್ತದೆ ಈ ಪುಸ್ತಕ. ಬ್ರಹ್ಮಚರ್ಯದ ಪ್ರಯೋಗ ಹೇಗಿರುತ್ತದೆ? ಯೋಗ, ಧ್ಯಾನ, ತಪಸ್ಸು ಇಂಥವುಗಳಿಂದ ಕೂಡಿರುತ್ತದೆ. ಆದರೆ ಗಾಂಧಿಯ ಬ್ರಹ್ಮಚರ್ಯ ಪ್ರಯೋಗ ಹೇಗಿತ್ತು? 1940ರ ದಶಕದಲ್ಲಿ ಗಾಂಧಿ ತಮ್ಮ ಬ್ರಹ್ಮಚರ್ಯವನ್ನು ಪರೀಕ್ಷಿಸಿದ್ದು ಕೆಲವು ಮಹಿಳೆಯರೊಂದಿಗೆ ಒಂದೇ ಹಾಸಿಗೆಯಲ್ಲಿ ಮಲಗುವ ಮೂಲಕ.

ಕೆಲವು ದಾಖಲೆಗಳ ಪ್ರಕಾರ, ಸುಮಾರು ಸಂದರ್ಭಗಳಲ್ಲಿ ಗಾಂಧಿ ಬಟ್ಟೆಯಿಲ್ಲದೆ ಮಲಗುತ್ತಿದ್ದರು. ಹಾಗಂತ ಗಾಂಧಿ ತಾವು ಜತೆಗೆ ಮಲಗುತ್ತಿದ್ದ ಮಹಿಳೆಯರೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರೇ? ಉಹುಂ. ಅದಕ್ಕೆ ದೃಢವಾದ ಪುರಾವೆ ಇಲ್ಲ. ಅವರ ಉದ್ದೇಶ ಲೈಂಗಿಕತೆಯನ್ನು ಅನುಭವಿಸುವುದಲ್ಲ, ಬದಲಾಗಿ ತಮ್ಮೊಳಗಿನ ಲೈಂಗಿಕ ಆಸೆ ಸಂಪೂರ್ಣವಾಗಿ ನಾಶವಾಗಿದೆಯೇ ಎಂಬುದನ್ನು ಪರೀಕ್ಷಿಸುವುದೆಂದು ಅವರು ಹೇಳಿಕೊಂಡಿದ್ದರು.

ಹಾಗೆಂದ ಮಾತ್ರಕ್ಕೆ ಈ ಪ್ರಯೋಗವನ್ನು ಒಪ್ಪಿಕೊಳ್ಳಬಹುದೇ? ಈಚಲ ಮರದ ಕೆಳಗೆ ಕೂತು ನಾನು ಕುಡಿದದ್ದು ಎಳನೀರು ಅಂದರೆ ನಂಬುತ್ತಾರೆಯೇ? ವೇಶ್ಯೆಯ ಮನೆಗೆ ಹೋಗಿ ಭಜನೆ ಮಾಡಿಬಂದೆ ಅಂದರೆ ನಂಬುತ್ತಾರೆಯೇ? ಸುಮ್ಮನೆ ಮಲಗಿದ್ದೆ ಆದರೂ ಆ ಮಹಿಳೆಯರ ಬದುಕು ಭವಿಷ್ಯ ಚಾರಿತ್ರ್ಯ ಏನಾಗಿದ್ದಿರಬಹುದು? ಒಬ್ಬ ಮಹಾನ್ ನಾಯಕ ತನ್ನ ಬ್ರಹ್ಮಚರ್ಯ ಪ್ರಯೋಗಕ್ಕಾಗಿ ತನ್ನ ಮೇಲೆ ಅವಲಂಬಿತರಾಗಿದ್ದ ಯುವತಿಯರನ್ನು ಇಂಥ ಪರೀಕ್ಷೆಗೆ ಒಳಪಡಿಸುವುದು ನೈತಿಕವಾಗಿ ಸರಿಯೇ? 1906ರಲ್ಲಿ ಗಾಂಧಿ ಬ್ರಹ್ಮಚರ್ಯದ ಪ್ರತಿಜ್ಞೆ ಕೈಗೊಂಡಾಗ ಆಗ ಅವರಿಗೆ 37 ವರ್ಷ.

ಕಸ್ತೂರ್‌ಬಾ ಅವರೊಂದಿಗೆ ವಿವಾಹವಾಗಿ ಹಲವು ವರ್ಷಗಳಾಗಿದ್ದವು. ಮಕ್ಕಳೂ ಇದ್ದರು. ಆದರೂ ತಮ್ಮ ಮುಂದಿನ ಜೀವನವನ್ನು ಸಂಪೂರ್ಣವಾಗಿ ಬ್ರಹ್ಮಚರ್ಯ ಪ್ರಯೋಗಕ್ಕೆ ಒಡ್ಡಿಕೊಳ್ಳಲು ನಿರ್ಧರಿಸುತ್ತಾರೆ ಗಾಂಧಿ. ಗಾಂಧಿಯ ಪ್ರಕಾರ ಬ್ರಹ್ಮಚರ್ಯ ಎಂದರೆ ಕೇವಲ ದೈಹಿಕ ಸಂಬಂಧದಿಂದ ದೂರವಿರುವುದಲ್ಲ, ಮನಸ್ಸು, ಮಾತು, ಆಲೋಚನೆ ಮತ್ತು ಕ್ರಿಯೆ– ಎಲ್ಲದರ ಮೇಲೂ ಸಂಪೂರ್ಣ ನಿಯಂತ್ರಣ ಸಾಧಿಸುವುದು. ಅವರ ದೃಷ್ಟಿಯಲ್ಲಿ ಇದು ರಾಜಕೀಯ ಹೋರಾಟಕ್ಕೂ ಸಂಬಂಧಿಸಿದ ವಿಷಯವಾಗಿತ್ತು.





ಆತ್ಮಸಂಯಮವಿಲ್ಲದೆ ಸತ್ಯಾಗ್ರಹಿಗೆ ನೈತಿಕ ಶಕ್ತಿ ಸಿಗುವುದಿಲ್ಲ ಎಂದು ಅವರು ನಂಬಿದ್ದರೆಂದು ಎನ್. ಕೆ ಬೋಸ್ ಬರೆಯುತ್ತಾರೆ. 1944ರಲ್ಲಿ ಕಸ್ತೂರ್‌ಬಾ ನಿಧನರಾದರು. ಅದಾದ ಬಳಿಕ ಗಾಂಧೀಜಿಯವರ ಆಂತರಿಕ ಆತ್ಮಪರಿಶೀಲನೆ ಇನ್ನಷ್ಟು ತೀವ್ರವಾಯಿತು. ಇದೇ ಸಮಯದಲ್ಲಿ ದೇಶವೂ ಭೀಕರ ಕೋಮು ಹಿಂಸೆಯಿಂದ ಕಂಗೆಟ್ಟಿತ್ತು. ನೋವಾಖಾಲಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ಹಿಂದೂ–ಮುಸ್ಲಿಂ ಸಂಘರ್ಷಗಳು ನಡೆಯುತ್ತಿದ್ದವು. ಗಾಂಧೀಜಿಯ ಅಹಿಂಸೆಯ ಮೇಲಿನ ನಂಬಿಕೆಯೇ ಪರೀಕ್ಷೆಗೆ ಒಳಗಾಗಿತ್ತು. ಆಗ ಗಾಂಧಿ ತಮ್ಮೊಳಗೇ ಒಂದು ಪ್ರಶ್ನೆ ಕೇಳಿಕೊಳ್ಳುತ್ತಾರೆ; ನಾನು ಅಹಿಂಸೆಯನ್ನು ಬೋಧಿಸುತ್ತಿದ್ದೇನೆ.

ಆದರೆ ನನಗೆ ಅರ್ಹತೆ ಇದೆಯೇ? ಈ ಆತ್ಮಪರೀಕ್ಷೆಯ ಭಾಗವಾಗಿಯೇ ಅವರು ಕೆಲವು ಮಹಿಳೆಯರೊಂದಿಗೆ ಮಲಗುವ ಪ್ರಯೋಗಗಳನ್ನು ಪ್ರಾರಂಭಿಸಿದರು. ಇವರಲ್ಲಿ ಪ್ರಮುಖವಾಗಿ ಉಲ್ಲೇಖವಾಗುವವರು ಮನು ಗಾಂಧಿ ಮತ್ತು ಆಭಾ ಗಾಂಧಿ. ಮನು ಆಗ ಕೇವಲ ಹದಿಹರೆಯದ ಕೊನೆಯ ಹಂತದಲ್ಲಿದ್ದ ಯುವತಿ. ಆಭಾ ಕೂಡ ಯುವತಿಯೇ.

ಡಾ. ಸುಶೀಲಾ ನಯ್ಯರ್ ಸೇರಿದಂತೆ ಇನ್ನೂ ಕೆಲವು ಮಹಿಳೆಯರು ಗಾಂಧೀಜಿಯವರ ಪ್ರಯೋಗಗಳೊಂದಿಗೆ ಸಂಬಂಧ ಹೊಂದಿದ್ದರು. ಗಾಂಧೀಜಿಯವರ ದೃಷ್ಟಿಯಲ್ಲಿ ಇದು ಪಾವಿತ್ರ್ಯದ ಪರೀಕ್ಷೆ. ತಮ್ಮೊಳಗೆ ಯಾವುದೇ ಕಾಮವಾಸನೆ ಉಳಿದಿಲ್ಲವೆಂಬುದನ್ನು ಸಾಬೀತುಪಡಿಸುವ ಆಧ್ಯಾತ್ಮಿಕ ಪ್ರಯೋಗ. ಗಾಂಧಿ ಈ ಪ್ರಯೋಗದ ಬಗ್ಗೆ ಎಷ್ಟು ಹಟಮಾರಿಯಾಗಿದ್ದರು ಅಂದರೆ ಇದಕ್ಕಾಗಿಯೇ ಆತ್ಮೀಯರ ಅಸಮಾಧಾನಕ್ಕೆ ಗುರಿಯಾಗಿದ್ದರು. ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಕೆಲವು ಹಿರಿಯ ನಾಯಕರು ಕೂಡ ಗಾಂಧೀಜಿಯವರ ನಡೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಆದರೆ ಗಾಂಧಿ ಇದನ್ನು ಕೈ ಬಿಡುವ ಯೋಚನೆಯನ್ನೇ ಹೊಂದಿರಲಿಲ್ಲ. ಗಾಂಧಿ ಈ ಪ್ರಯೋಗವನ್ನು ಗುಟ್ಟಾಗಿ, ಕಳ್ಳತನದಂತೆ ನಡೆಸಲು ಪ್ರಯತ್ನಿಸಲಿಲ್ಲ. ಅವರು ತಮ್ಮ ಪ್ರಯೋಗಗಳ ಬಗ್ಗೆ ಬರೆಯುತ್ತಿದ್ದರು. ಅವುಗಳ ಬಗ್ಗೆ ಚರ್ಚಿಸುತ್ತಿದ್ದರು. ತಮ್ಮ ದೃಷ್ಟಿಯಲ್ಲಿ ತಾವು ಮಾಡುತ್ತಿರುವುದು ತಪ್ಪಲ್ಲವೆಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು.

ಗಾಂಧೀಜಿಯವರ ದೃಷ್ಟಿಯಲ್ಲಿ ಇದು ದೇಹದ ಪ್ರಯೋಗವಲ್ಲ; ಆತ್ಮದ ಪ್ರಯೋಗ. ಆದರೆ ಜಗತ್ತು ಅದನ್ನು ಹೇಗೆ ತಾನೇ ಒಪ್ಪಲು ಸಾಧ್ಯ? ಹಾಗೆಯೇ ಗಾಂಧಿಯ ಈ ಒಂದು ಅಧ್ಯಾಯವನ್ನು ಹಿಡಿದು ಅವರ ಸಂಪೂರ್ಣ ಜೀವನವನ್ನೇ ತಳ್ಳಿ ಹಾಕುವುದೂ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಮಾರ್ಗವಲ್ಲ. ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಕೊಡುಗೆ ಅಪಾರ. ಅಹಿಂಸೆಯನ್ನು ಜಾಗತಿಕ ರಾಜಕೀಯದ ಪ್ರಬಲ ನೈತಿಕ ಆಯುಧವನ್ನಾಗಿ ಮಾಡಿದ ಅವರ ಪಾತ್ರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಅದೇ ಸಮಯದಲ್ಲಿ ಅವರ ವೈಯಕ್ತಿಕ ಜೀವನದ ವಿವಾದಾತ್ಮಕ ನಿರ್ಧಾರಗಳನ್ನು ಪ್ರಶ್ನಿಸುವ ಹಕ್ಕನ್ನೂ ನಾವು ಕಳೆದುಕೊಳ್ಳಬಾರದು. ನಮ್ಮ ಸಂಸ್ಕೃತಿಯಲ್ಲಿ ದೇವರನ್ನೇ ಪ್ರಶ್ನಿಸುವ ಪರಂಪರೆ ಇದೆ. ರಾಮನ ನಿರ್ಧಾರಗಳನ್ನು ಪ್ರಶ್ನಿಸುವವರಿದ್ದಾರೆ. ಮಹಾಭಾರತದ ಪಾತ್ರಗಳನ್ನು ಪ್ರಶ್ನಿಸುತ್ತೇವೆ. ನಮ್ಮ ಪುರಾಣಗಳ ನಾಯಕರನ್ನೂ ನೈತಿಕ ದೃಷ್ಟಿಯಿಂದ ವಿಶ್ಲೇಷಿಸುತ್ತೇವೆ. ಹಾಗಿದ್ದರೆ ಗಾಂಧೀಜಿ ಮಾತ್ರ ಪ್ರಶ್ನಾತೀತರಾಗಬೇಕೇ? ಇಲ್ಲ.

ಗೌರವ ಮತ್ತು ಆರಾಧನೆ ಎರಡೂ ಒಂದೇ ಅಲ್ಲ. ಒಬ್ಬ ವ್ಯಕ್ತಿಯ ಕೊಡುಗೆಯನ್ನು ಗೌರವಿಸುತ್ತಲೇ ಅವರ ತಪ್ಪುಗಳನ್ನು ಪ್ರಶ್ನಿಸಬಹುದು. ಒಬ್ಬರ ಮಹತ್ವವನ್ನು ಒಪ್ಪಿಕೊಂಡೇ ಅವರ ನಿರ್ಧಾರಗಳ ನೈತಿಕತೆಯನ್ನು ಚರ್ಚಿಸಬಹುದು. ವಾಸ್ತವವಾಗಿ ಮಹಾನ್ ವ್ಯಕ್ತಿಯನ್ನು ನಿಜವಾಗಿ ಗೌರವಿಸುವ ಒಂದು ಮಾರ್ಗವೇ ಇದು. ಅವರನ್ನು ಮೂರ್ತಿಯನ್ನಾಗಿ ಮಾಡಿ ಮುಟ್ಟಲೂ ಹೆದರಬಾರದು. ಮನುಷ್ಯನನ್ನಾಗಿ ನೋಡಿ ಅರ್ಥಮಾಡಿಕೊಳ್ಳಬೇಕು.

ಗಾಂಧೀಜಿ ತಮ್ಮ ಜೀವನವನ್ನೇ ಸತ್ಯದ ಪ್ರಯೋಗ ಎಂದು ಕರೆದಿದ್ದರು. ಅಂದ ಮೇಲೆ ಅವರ ಜೀವನದ ಈ ಅಧ್ಯಾಯವೂ ಒಂದು ಪ್ರಯೋಗವೇ. ಆದರೆ ಅದನ್ನು ನಾವು ಯಾವ ಕಣ್ಣಿಂದ ನೋಡಬೇಕು ಎಂಬುದು ಮುಖ್ಯ. ಗಾಂಧಿ ಇಂದಿನ ಕಾಲಘಟ್ಟದಲ್ಲಿ ಇದ್ದಿದ್ದರೆ ಈ ಪ್ರಯೋಗಕ್ಕೆ ಅವಕಾಶ ಸಿಗುತ್ತಿತ್ತೇ? ಇದು ಸ್ಫೋಟಕ ಸುದ್ದಿಯಾಗಿ ಹೊರ ಬಂದಮೇಲೆ ಗಾಂಧಿಯ ಇಮೇಜ್ ಮಹಾತ್ಮನ ಇಮೇಜಾಗಿ ಉಳಿಯುತ್ತಿತ್ತೇ? ಗಾಂಧಿ ಇಂದಿನ ಕಾಲಘಟ್ಟದಲ್ಲಿ ಅದನ್ನು ಸಮರ್ಥಿಸಿ ಕೊಳ್ಳಲು ಸಾಧ್ಯವಿತ್ತೇ? ಅಸಲಿಗೆ ಅಂಥ ಪ್ರಯೋಗದ ಅಗತ್ಯವಿತ್ತೇ? ಸ್ತ್ರೀವಾದದ ಗಾಂಧಿಗೆ ಬ್ರಹ್ಮಚರ್ಯ ಪರೀಕ್ಷೆಗೆ ಬೇರೆ ಮಾರ್ಗವೇ ಇರಲಿಲ್ಲವೇ? ವೃದ್ಧಾಪ್ಯದಲ್ಲಿ ಬ್ರಹ್ಮಚರ್ಯ ಗೆದ್ದು ಆಗಬೇಕಾಗಿದ್ದಾದರೂ ಏನು? ಇಂಥ ಹಲವು ಪ್ರಶ್ನೆಗಳ ಮಧ್ಯೆ ಆ ಮಹಿಳೆಯರ ಮುಂದಿನ ಬದುಕಿನ ಬಗ್ಗೆ ಯೋಚಿಸಿ ಬೇಸರವಾಗುತ್ತದೆ. ಏನೇ ಇರಲಿ ಇಂಥ ಬದುಕಿನಲ್ಲಿ ಪುಟಗಳನ್ನು ಹೊಂದಿಯೂ ಮಹಾತ್ಮರೆನಿಸಿಕೊಳ್ಳುವುದು ಸುಲಭದ ಮಾತಲ್ಲ. ಅದು ಮಹಾತ್ಮರಿಗೆ ಮಾತ್ರವೇ ಸಾಧ್ಯ.

**– ನವೀನ್** ಸಾಗರ್



# ವಿ ಸಿ ಡಿ ಟಿವಿ / ಟಿ ವಿ ಚಿತ್ರ ಪ್ರದರ್ಶನ

ಇತ್ತೀಚಿನ ಪೀಳಿಗೆಗೆ ಈ ಶೀರ್ಷಿಕೆ ಬಗ್ಗೆ ತಿಳಿದಿರುವುದಿಲ್ಲ ಏಕೆಂದರೆ ಈಗ ಎಲ್ಲರ ಮನೆಯ್ಲಲಿಯು ಸಹ ಟಿ ವಿ ಇರುವುದರಿಂದ, ಇತ್ತೀಚಿನ ದಿನಗಳಲ್ಲಿ ಈ ವಿ ಸಿ ಡಿ ಹಾಗು ಹಳ್ಳಿಯ ಚಿತ್ರ ಪ್ರದರ್ಶನ ಕಡಿಮೆಯಾಗಿದ್ದು ಸಾಮಾನ್ಯವಾಗಿ ನೋಡಲು ಸಿಗುವುದಿಲ್ಲ.

ಈ ರೀತಿಯ ಕಾರ್ಯಕ್ರಮ ಇರುವುದನ್ನು ಸಾಮಾನ್ಯವಾಗಿ ಧ್ವನಿವರ್ಧಕ ಮೂಲಕ ತಿಳಿಸಲಾಗುತಿತ್ತು, ಆ ಸೌಲಭ್ಯ ಎಲ್ಲದ ಕಡೆಯಲಿ ಒಬ್ಬರಿಂದ ಇನ್ನೊಬ್ಬರಿಗೆ ಆ ಮಾಹಿತಿ ತಿಳಿಯುತ್ತಿತ್ತು. ವಿಷಯ ತಿಳಿದ ಕೂಡಲೇ ಎಲ್ಲರಲ್ಲಿಯೂ ಮೊದಲ ಕುತೂಹಲ ಯಾವ ಯಾವ ಸಿನಿಮಾ ಹಾಕುತ್ತಾರೆ ಮತ್ತು ಯಾವ ನಾಯಕ ನಟನ ಸಿನಿಮಾ ಎಂಬುದೇ ಸ್ವಾರಸ್ಯಕರ.

ಟಿವಿ ತರುವವರಿಗೂ ಎಲ್ಲರಲ್ಲಿಯೂ ಒಂದೇ ಆಸೆ. ಆ ಟಿವಿ ಎಷ್ಟು ದೊಡ್ಡದು ಹಾಗೂ ಅದು ಬಿಳಿ ಕಪ್ಪು ಅಥವಾ ಕಲರ್ (ಬಣ್ಣದ ) ಟಿವಿ ಎಂಬ ಮಾಹಿತಿಗಳು ಈಗಾಗಲೇ ಆ ಟಿವಿ ಕಾರ್ಯಕ್ರಮ ಆಯೋಜಿಸಿದರ ಮನೆಯವರಿಂದ ತಿಳಿದುಕೊಳ್ಳುತ್ತಿದ್ದರು ಮತ್ತು ರಾತ್ರಿ ಊಟ ಬೇಗ ಮುಗಿಸಿ ಕಾಯುತ್ತಿದ್ದ ಆ ಕ್ಷಣಗಳೇ ಮಧುರ

ಹೊಲ ಗದ್ದೆಯಲ್ಲಿ ದಿನಪೂರ್ತಿ ದುಡಿದು ದಣಿದಿದ್ದರೂ ಎಲ್ಲಾ ನೋವು ಮತ್ತು ಆಯಾಸವನ್ನು ಮರೆತು ಕೊಂಚ ಮನರಂಜನೆಗೆ ಹಾತೊರೆಯುತ್ತಿದ್ದ ಮುಗ್ಧ ನಿಶ್ಕಲ್ಮಷದ ಮನಸುಗಳ ಮೌನ ಮತ್ತು ಜೀವನದ ಜಂಜಾಟಗಳ ಕ್ಷಣಿಕ ಸ್ವಲ್ಪ ಸಮಯದ ಮುಕ್ತಿಗೆ ಇದೊಂದು ಚಿಕ್ಕ ಮನರಂಜನೆಯಾಗಿತ್ತು.

ಎಲ್ಲರೂ ಟಿವಿಗೆ ಹತ್ತಿರ ಇರುವ ಹಾಗೆ ಚಾಪೆಯನ್ನು ಹಾಸಿ ಅವರ ಜಾಗವನ್ನು ಕಾಯ್ದಿರಿಸುತಿದ್ದರು. ಕೆಲವೊಮ್ಮೆ ಚಿಕ್ಕ ಪುಟ್ಟ ಜಗಳಗಳೂ ಸಹ ನಡೆಯುತ್ತಿದ್ದವು. ಏನೇ ಆದರೂ ಅದೆಲ್ಲವೂ ಕಾರ್ಯಕ್ರಮ ಪ್ರಾರಂಭ ಆಗುವವರೆಗೂ ಮಾತ್ರ ಸೀಮಿತ.

ಮೊದಲ ಸಿನೆಮಾ ವಿ ಸಿ ಡಿ ಪರೀಕ್ಷೆ ನಡೆಸುತಿದ್ದಾಗ ಎಲ್ಲರೂ ಸಹ ತುಂಬಾ ಗಾಂಭೀರ್ಯದಿಂದ ಸುಜನಶೀಲರಾಗಿ ಕುಳಿತಿರುತ್ತಿದ್ದರು. ಈ ವಿ ಸಿ ಡಿ ತುಂಬಾ ಹಳೆಯದಾಗಿದ್ದರೆ ಟಿವಿಯಲ್ಲಿ ಚಿತ್ರ

ಸರಿಯಾಗಿ ಕಾಣಿಸುತ್ತಿರಲಿಲ್ಲ. ಕೆಲವೊಮ್ಮೆ ಅದಕ್ಕೆ ಮದುವೆಯ / ಲಗ್ನ ಪತ್ರಿಕೆಯ ಲಕೋಟೆಯ ಕಾಗದವನ್ನು ಆ ವಿ ಸಿ ಡಿಯ ಟೇಪ್ ಮಧ್ಯೆ ಇರಿಸಲಾಗುತಿತ್ತು. ಆಗ ಟಿವಿಯ ಚಿತ್ರ ಸುಧಾರಿಸುತಿತ್ತು.

ಈ ಎಲ್ಲ ಹಂತಗಳನ್ನು ದಾಟಿ ಯಾವುದೊ ಸಿನಿಮಾ ನಡೆಯುತ್ತಿದ್ದಾಗ ಮಧ್ಯೆ ಮಳೆ ಬಂದರೆ ಎಲ್ಲವೂ ಹಾಳಾಗುತಿತ್ತು ಮತ್ತು ಕರೆಂಟ್ ಹೋದರೆ ಪಾಪ ಎಲ್ಲರು ಸಹ ಮತ್ತೆ ಕರೆಂಟ್ ಬರುವವರೆಗೂ ಕಾಯುತಿದ್ದರು. ಇಷ್ಟೆಲ್ಲಾ ಸಮಸ್ಯೆಗಳ ಮಧ್ಯೆ ಯಾವುದೇ ಸಿನೆಮಾ ಪ್ರದರ್ಶನದಲ್ಲಿ ಬರುವ ಪಾತ್ರಗಳಲ್ಲಿ ಅವರ ಕಷ್ಟ, ತಪ್ಪು, ಪಶ್ಚತ್ತಾಪ, ಧೈರ್ಯಕ್ಕೆ ಸ್ಪೂರ್ತಿಯಾಗುತಿತ್ತು.

ಈ ಮಧ್ಯೆ ಕೆಲವೊಬ್ಬರು ಅಲ್ಲೇ ನಿದ್ರೆಗೆ ಜಾರುತಿದ್ದರು, ಅವರು ಮಲಗಿರುವ ಭಂಗಿಯನ್ನು ನೋಡಿ ಎಲ್ಲರಿಗೂ ತೋರಿಸಿ ಅಪಹಾಸ್ಯ ಮಾಡುತಿದ್ದರು. ನನಗೆ ತಿಳಿದ ಹಾಗೆ ನಾನು 12–15 ವರ್ಷದವನಿದ್ದಾಗ ಹಾಗೆ ಸಿನಿಮಾ ನೋಡುತ್ತಾ ಅಲ್ಲೇ ನಿದ್ರೆಗೆ ಜಾರಿದ್ದ ನನ್ನ ಸ್ನೇಹಿತನ ಬಾಯಿಗೆ ಅಲ್ಲೇ ಬೇರೆಯವರು ಸೇದಿ ಬಿದ್ದಿದ್ದ ತುಂಡು ಬಿಡಿಯನ್ನು ಅವನ ಬಾಯಿಗೆ ಇಟ್ಟು ಎಲ್ಲರಿಗೂ ತೋರಿಸಿ ಹೊಟ್ಟೆ ಹುಣ್ಣಾಗಿಸುವಷ್ಟು ನಿಕ್ಕಿದ್ದು ಮರೆಯಲಾಗದ ನೆನಪು. ಬೆಳಗಿನ ತನಕ ಈ ರೀತಿಯಾಗಿ ಎರಡು ಅಥವಾ ಮೂರು ಸಿನೆಮಾ ನೋಡುತಿದ್ದ ಅಂದಿನ ಮನರಂಜನೆಯ ಆ ದಿನಗಳೇ ಅವಿಸ್ಮರಣೀಯ.

**– ದೀಪು ಬೆಳ್ಳುಳ್ಳಿ** ಮೈಸೂರು

# ರಸ್ತೆ ಬದಿ ಕಸ: ಸಿಸಿಟಿವಿ ಕ್ಯಾಮರಾ ಅಳವಡಿಕೆ

## ಪುರಸಭೆ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷ ಅಕ್ರಂ ಶರೀಫ್ ಭರವಸೆ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಪ್ರಮುಖ ರಸ್ತೆಯ ಎಲ್ಲೆಂದರಲ್ಲಿ ಸಾರ್ವಜನಿಕರು ಕಸ ಎಸೆಯುತ್ತಿದ್ದು ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿ ಸೌಂದರ್ಯ ಕಾಪಾಡಲು ಕ್ರಮ ವಹಿಸ ಲಾಗುವುದೆಂದು ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್ ಅವರು ಭರವಸೆ ನೀಡಿದರು.

ಪುರಸಭೆಯ ವೇಲಾಪುರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ 23 ವಾರ್ಡ್‌ಗಳಿಗೂ ಸಿಸಿಟಿವಿ ಕ್ಯಾಮರಾ ಅಳವಡಿಸುವ ಬದಲು ಅಗತ್ಯವಿರುವ ಪ್ರಮುಖ ಸ್ಥಳಗಳನ್ನು ಗುರುತಿಸಿ ಅಲ್ಲಿ ಮಾತ್ರ ಕ್ಯಾಮರಾ ಅಳವಡಿಸಲಾಗುವುದು. ಪುರಸಭೆಯಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆರು ಹೊಸ ಟಿಪ್ಪರ್ ಆಟೋಗಳು ಶೀಘ್ರದಲ್ಲೇ ಬರಲಿವೆ. ಅದರಿಂದ ಕಸ ಸಂಗ್ರಹಣೆಯಲ್ಲಿ ಮತ್ತಷ್ಟು ಸುಧಾರಣೆ ಸಾಧ್ಯವಾಗುತ್ತದೆಂದರು.

ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಂಡಿರುವ ಕೆಲ ಗುತ್ತಿಗೆದಾರರ ಕಾರ್ಯನಿರ್ವಹಣೆ ಸಮರ್ಪಕವಾಗಿಲ್ಲ ಎಂಬ ದೂರುಗಳಿವೆ. ಉಳಿದಿರುವ ಕೆಲವು ದಿನಗಳಲ್ಲಿ ಪಟ್ಟಣದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುವುದೆಂದರು.

ಸದಸ್ಯ ಜಗದೀಶ್ ಅವರು ಮಾತನಾಡಿ, ಹಲವು ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸ ಸಂಗ್ರಹವಾಗುತ್ತಿದೆ. ಕಸ ಎಸೆಯುವವರ ಮೇಲೆ ನಿಗಾ ವಹಿಸಲು ಅಗತ್ಯ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದು ಮನವಿ ಮಾಡಿದರು.

ಸದಸ್ಯ ಕೆ.ಪಿ.ಶೈಲೇಶ್ ಅವರು ಮಾತನಾಡಿ, 23 ವಾರ್ಡ್‌ಗಳಿಗೆ ಕೇವಲ ಮೂರು ಟಿಪ್ಪರ್ ಇರುವದರಿಂದ ಸಮಸ್ಯೆಯಾಗುತ್ತಿದೆ ಎಂದರು.

ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಅವರು ಮಾತನಾಡಿ, ಕಸ ಎಸೆಯುವ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿದರೆ ಜನರಲ್ಲಿ ಜಾಗೃತಿ ಮೂಡಿ ಕಸ ಹಾಕುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆಂದರು.

**2.02 ಕೋ.ರೂ. ಅನುದಾನ**

2026–27ನೇ ಸಾಲಿನ 16ನೇ ಹಣಕಾಸು ಯೋಜನೆಯಡಿ ಪುರಸಭೆಗೆ 2.02 ಕೋ.ರೂ. ಅನುದಾನ ಹಂಚಿಕೆಯಾಗಿದ್ದು, ಹೊಸ ಮಾರ್ಗಸೂಚಿಯಂತೆ ಯೋಜನೆ ರೂಪಿಸುವ ಕುರಿತು ಚರ್ಚಿಸಲಾಯಿತು.

ಸದಸ್ಯ ಜಮಾಲುದ್ದೀನ್ ಅವರು ಮಾತನಾಡಿ, ಸರ್ಕಾರದಿಂದ ಈಗಾಗಲೇ ವಿವಿಧ ಯೋಜನೆಗಳಡಿ ಅನುದಾನ ಬಿಡುಗಡೆಯಾಗಿದ್ದು, 23 ವಾರ್ಡ್‌ಗಳ ಹಲವು ಭಾಗಗಳಲ್ಲಿ ಕಾಮಗಾರಿ ಗಳು ನಡೆಯುತ್ತಿವೆ. ಇನ್ನೂ ಎಷ್ಟು ಕಾಮಗಾರಿ ಬಾಕಿ ಉಳಿದಿವೆ ಎಂಬುದರ ಕುರಿತು ಸ್ಪಷ್ಟ ಮಾಹಿತಿ ನೀಡಬೇಕು. ಸದಸ್ಯರ ಅವಧಿ ಮುಕ್ತಾಯಗೊಳ್ಳುವ ಮುನ್ನ ಬಾಕಿ ಕಾಮಗಾರಿಗೆ ಚಾಲನೆ ನೀಡಬೇಕೆಂದು ಒತ್ತಾಯಿಸಿದರು.

### ಕುಡಿಯುವ ನೀರಿಗೆ ಅಪ್ಪಣೆ ಬೇಕೇ

ಪಟ್ಟಣದಲ್ಲಿ ಜನಸಂದಣಿ ಇರುವ ಸ್ಥಳಗಳಲ್ಲಿ ದಾನಿಗಳು ಮುಂದೆ ಬಂದರೆ, ಅಗತ್ಯವಿರುವ ಸ್ಥಳಗಳನ್ನು ಪುರಸಭೆಯಿಂದ ಗುರುತಿಸಿ ಬಸ್ ನಿಲ್ದಾಣಕ್ಕೆ ಅನುಮತಿ ನೀಡಲಾಗುವುದೆಂದು ಅಧ್ಯಕ್ಷ ಆಕ್ರಂ ಶರೀಫ್ ತಿಳಿಸಿದರು.

ಈ ಸಂದರ್ಭದಲ್ಲಿ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಹಿಂದೆ ತಹಶೀಲ್ದಾರ್ ಮಮತಾ ಅವರ ಮನವಿ ಮೇರೆಗೆ, ತಾಲೂಕು ಕಚೇರಿ ಮುಂಭಾಗ ನಿರ್ಮಿಸಲಾಗಿರುವ ಉಚಿತ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆಗೆ ಶಾಸಕರು ಅವಕಾಶ ಕಲ್ಪಿಸಿರಲಿಲ್ಲ. ವರ್ಷ ಕಳೆದರೂ ಉದ್ಘಾಟನೆಯಾಗದೆ ಇರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ನೀರಿನ ಘಟಕವನ್ನು ಶೀಘ್ರ ಉದ್ಘಾಟಿಸಿ ಬಳಕೆಗೆ ಮುಕ್ತಗೊಳಿಸಬೇಕೆಂದು ಒತ್ತಾಯಿಸಿದರು.

ಜನರಿಗೆ ಉಚಿತ ಶುದ್ಧ ಕುಡಿಯುವ ನೀರು ಒದಗಿಸುವ ಘಟಕವನ್ನು ಉದ್ಘಾಟಿಸಲು ಇಷ್ಟೊಂದು ವಿಳಂಬ ಏಕೆ. ಕುಡಿಯುವ ನೀರಿಗೆ ಯಾರ ಅಪ್ಪಣೆ ಬೇಕೆಂದು ಖಾರವಾಗಿ ಪ್ರಶ್ನಿಸಿದರು.

ಸದಸ್ಯ ಅಶೋಕ್ ಅವರು ಮಧ್ಯ ಪ್ರವೇಶಿಸಿ, ಅಡೆತಡೆ ಮಾಡಿರೋದು ಮಾಜಿ ಸಚಿವ ಬಿ. ಶಿವರಾಮ್ ಹೊರತು ಶಾಸಕರಲ್ಲ ಎಂದು ತಿರುಗೇಟು ನೀಡಿದರು. ಈ ವೇಳೆ ಇಬ್ಬರ ನಡುವೆ ಜೋರು ವಾಗ್ವಾದ ನಡೆಯಿತು.

ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಅವರು ಮಾತನಾಡಿ, ಕಳಪೆ ಕಾಮಗಾರಿ ನಡೆಸುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಕಾಮಗಾರಿ ನಡೆಯುವ ಸ್ಥಳಗಳಿಗೆ ಸಂಬಂಧಪಟ್ಟ ಇಂಜಿನಿಯರ್‌ಗಳು ಕಡ್ಡಾಯವಾಗಿ ಭೇಟಿ ನೀಡಿ ಕಾಮಗಾರಿ ಗುಣಮಟ್ಟ ಪರಿಶೀಲಿಸ ಬೇಕೆಂದರು.

**ಅನುಮತಿ ಇಲ್ಲದೆ ಶೆಡ್ ನಿರ್ಮಾಣ**

ಎಪಿಎಂಸಿ ಸಮೀಪದ ಜಾಗದಲ್ಲಿ ಶೆಡ್ ನಿರ್ಮಾಣ ಮಾಡುತ್ತಿರುವ ಕುರಿತು ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಪ್ರಶ್ನಿಸಿದರು. ತಳ್ಳುಗಾಡಿಯಲ್ಲಿ ವ್ಯಾಪಾರ ನಡೆಸುತ್ತಿರುವ ಬಗ್ಗೆ ಮಾಹಿತಿ ಇದೆ ಎಂದು ಅಧ್ಯಕ್ಷ ಆಕ್ರಂ ಶರೀಫ್ ತಿಳಿಸಿದರು. ಆದರೆ ತಳ್ಳುಗಾಡಿಯಲ್ಲ, ಶೆಡ್ ನಿರ್ಮಾಣ ಮಾಡಲಾಗುತ್ತಿದೆಂದು ಸದಸ್ಯೆ ಸ್ಪಷ್ಟಪಡಿಸಿದರು. ಈ ಕುರಿತು ಪರಿಶೀಲಿಸಿ, ಪುರಸಭೆಯ ಅನುಮತಿ ಇಲ್ಲದೆ ಶೆಡ್ ನಿರ್ಮಿಸಿರುವುದು ಕಂಡುಬಂದರೆ ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಪುರಸಭಾ ಉಪಾಧ್ಯಕ್ಷೆ ಉಷಾ ಸತೀಶ್, ಮುಖ್ಯಾಧಿಕಾರಿ ಬಸವರಾಜ ಶಿಗ್ಗಾವಿ, ಸದಸ್ಯರು ಹಾಗು ಅಧಿಕಾರಿಗಳು ಉಪಸ್ಥಿತರಿದ್ದರು.

## ಹಾಸನಾಂಬ ಜಾತ್ರೆಗೆ 13.54 ಕೋ.ರೂ: ಜಿಲ್ಲಾಧಿಕಾರಿ ಅನುಮೋದನೆ

» ಮೊದಲನೇ ಪುಟದಿಂದ

ಪೊಲೀಸ್ ಸಿಬ್ಬಂದಿಯ ಊಟೋಪಚಾರಕ್ಕೆ 75 ಲ.ರೂ. ಮೀಸಲಿಡಲಾಗಿದೆ.

**ದೇವಾಲಯದ ದುರಸ್ತಿ, ಅಲಂಕಾರಕ್ಕೆ ಆದ್ಯತೆ**

ದೇವಾಲಯದ ರೈಲಿಂಗ್ ದುರಸ್ತಿ, ಸಿಸಿಟಿವಿ ವ್ಯವಸ್ಥೆ, ದೇವಾಲಯದ ಒಳಭಾಗ ಮತ್ತು ರಾಜಗೋಪುರಕ್ಕೆ ಬಣ್ಣ ಬಳಿಯುವುದು ಸೇರಿ ವಿವಿಧ ದುರಸ್ತಿ ಕಾಮಗಾರಿಗಳಿಗೆ 21 ಲ.ರೂ. ನಿಗದಿಪಡಿಸಲಾಗಿದೆ. ಹೂವಿನ ಅಲಂಕಾರ, ಕಲಾಕೃತಿಗಳು ಮತ್ತು ಕುಂಡಗಳ ನಿರ್ವಹಣೆಗೆ 90 ಲ.ರೂ. ವೆಚ್ಚದ ಯೋಜನೆ ರೂಪಿಸಲಾಗಿದೆ. ಗಣ್ಯರ ಸತ್ಕಾರ, ಅತಿಥಿಗಳ ಆತಿಥ್ಯ, ಸಿಬ್ಬಂದಿ ತರಬೇತಿ, ಧಾರ್ಮಿಕ ಆಚರಣೆಗಳು ಹಾಗು ಇತರೆ ಅಗತ್ಯ ವ್ಯವಸ್ಥೆಗಳಿಗೂ ಅನುದಾನ ಮೀಸಲಿಡಲಾಗಿದೆ.

**ವಸ್ತು ಪ್ರದರ್ಶನ ವ್ಯವಸ್ಥೆಗೆ 75 ಲ.ರೂ.:** ಜಾತ್ರೆಯ ಅಂಗವಾಗಿ ವಸ್ತು ಪ್ರದರ್ಶನ, ಪಾಕ ಪ್ರದರ್ಶನ ಮತ್ತು ಮಳಿಗೆಗಳ ನಿರ್ವಹಣೆಗೆ 30 ಲ.ರೂ. ನಿಗದಿಪಡಿಸಲಾಗಿದೆ. ವೇದಿಕೆ, ಹಸಿರು ಕೊಠಡಿ ಹಾಗೂ ವಾಸ್ತವ್ಯ ವ್ಯವಸ್ಥೆಗಳಿಗೆ 15 ಲ.ರೂ. ಮತ್ತು ಇತರೆ ಅಗತ್ಯ ಕಾಮಗಾರಿಗಳಿಗೆ 30 ಲ.ರೂ. ಮೀಸಲಿಡಲಾಗಿದೆ.

## ನೈಸ್: 2ಜಿ, ಕಲ್ಲಿದ್ದಲಿಗಿಂತ ದೊಡ್ಡ ಹಗರಣ

» ಮೊದಲನೇ ಪುಟದಿಂದ

ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಹೆಸರಿನಲ್ಲಿ ಮತ್ತೊಂದು ಒಪ್ಪಂದ ಮಾಡಿಕೊಳ್ಳಲಾಯಿತು. ಬಳಿಕ ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗೆ ಪ್ರಾಧಿಕಾರ ರಚಿಸಲಾಯಿತು. ಆ ಸಂದರ್ಭದಲ್ಲಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದು, ಡಿ.ಕೆ.ಶಿವಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದರೆಂದು ಹೇಳಿದರು.

**ಆಡಿಯೋ ಬಿಡುಗಡೆ:** ನೈಸ್ ಯೋಜನೆಯ ವ್ಯಾಪ್ತಿಯಲ್ಲಿನ ಭೂಮಿಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಎತ್ತಿದ ಅವರು, 2003ರಲ್ಲಿ ಸುಮಾರು ನಾಲ್ಕು ಕೋಟಿ ರೂ. ಇದ್ದ ಆಸ್ತಿ ಮೌಲ್ಯ 2023ರಲ್ಲಿ 1,413 ಕೋಟಿ ರೂ. ಏರಿಕೆಯಾಗಿದೆ ಎಂದು ದಾಖಲೆಗಳನ್ನು ಉಲ್ಲೇಖಿಸಿದರು. ಈ ಬೆಳವಣಿಗೆಗೆ ಯೋಜನೆಯ ವಿನ್ಯಾಸ ಬದಲಾವಣೆ ಕಾರಣವೆಂದು ಆರೋಪಿಸಿದರು. ಸಿದ್ದಗಂಗಾ ಮಠಕ್ಕೆ ಸೇರಿದ ಭೂಮಿಯನ್ನು ಯೋಜನೆಗಾಗಿ ಪಡೆದುಕೊಳ್ಳಲಾಗಿತ್ತು. ರಸ್ತೆಗಾಗಿ ಬಳಕೆಯಾದ ಭೂಮಿಯನ್ನು ಹೊರತುಪಡಿಸಿ ಉಳಿದ ಭೂಮಿಯನ್ನು ವಾಪಾಸ್ ನೀಡುವಂತೆ ಮಠದ ಸ್ವಾಮೀಜಿಗಳು ಮನವಿ ಮಾಡಿದ್ದರೂ ಕ್ರಮ ಕೈಗೊಳ್ಳಲಾಗಿಲ್ಲವೆಂದು ಹೇಳಿ, ಈ ಕುರಿತು ಆಡಿಯೋವನ್ನು ಬಿಡುಗಡೆ ಮಾಡಿದರು.

## ವಿಶ್ವ ಹೃದಯ ದಿನ: 999 ರೂ. ಗೆ ಹೃದಯ ತಪಾಸಣೆ ಪ್ಯಾಕೇಜ್

• ಪ್ರಜೋದಯ ವರದಿ




**ಹಾಸನ:** ವಿಶ್ವ ಹೃದಯ ದಿನದ ಅಂಗವಾಗಿ ಸಾರ್ವಜನಿಕರಲ್ಲಿ ಹೃದಯದ ಆರೋಗ್ಯದ ಕುರಿತು ಜಾಗೃತಿ ಮೂಡಿಸಲು ಸೆ.29 ರಿಂದ ಅ.2ರ ವರೆಗೆ ಕೇವಲ 999 ರೂ. ಗೆ ಹೃದಯ ತಪಾಸಣೆ ಮತ್ತು ಅ.2ರ ಗಾಂಧಿ ಜಯಂತಿ ದಿನ 18 ವರ್ಷದೊಳಗಿನ ಮಕ್ಕಳಿಗೆ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಇಂಡಿಯಾನಾ ಆಸ್ಪತ್ರೆ ಹೃದ್ರೋಗ ತಜ್ಞ ಡಾ|| ಅನೂಪ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಹೃದಯದ ಬಡಿತ ಹಾಗು ರಿದಮ್ ವೈಪರೀತ್ಯಗಳ ಕುರಿತು ಅರಿವು ಮೂಡಿಸಲು ಡೋಂಟ್ ಮಿಸ್ ಎ ಬೀಟ್ ಘೋಷವಾಕ್ಯದಡಿ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇತ್ತೀಚಿನ ದಿನಗಳಲ್ಲಿ ಸಣ್ಣ ವಯಸ್ಸಿನ ಮಕ್ಕಳು ಹಾಗು 25 ರಿಂದ 30 ವರ್ಷದ ಯುವಕರಲ್ಲಿ ಧೂಮಪಾನ, ಮದ್ಯಪಾನ, ಮಾನಸಿಕ ಒತ್ತಡ ಹಾಗು ಬದಲಾದ ಜೀವನ ಶೈಲಿಯಿಂದಾಗಿ ಹೃದಯಾಘಾತ ಮತ್ತು ಹೃದಯ ಬಡಿತ ದಲ್ಲಿ ಏರುಪೇರಾಗುವ ಸಮಸ್ಯೆಗಳು ಹೆಚ್ಚಾಗುತ್ತಿದೆ. ಅದಕ್ಕೆ ವಂಶಪಾರಂಪರ್ಯ, ಜ್ವರದ ಬಳಿಕ ಸಂಭವಿಸುವ ಅನಾರೋಗ್ಯ ಹಾಗು ಜೀವನ ಶೈಲಿ ಕಾರಣವಾಗಿರಬಹುದು. ಯಾರೂ ಆರೋಗ್ಯದ ಕುರಿತು ನಿರ್ಲಕ್ಷ್ಯ ಹೊಂದಬಾರದೆಂದರು.

ಅತ್ಯಂತ ಕಡಿಮೆ ದರದಲ್ಲಿ ಈಸಿಜಿ, ಎಕೋ, ಟಿಎಂಟಿ ಮಾಡಲಾಗುತ್ತದೆ. ಅದಕ್ಕೆ ಕೇವಲ 999 ರೂ. ಶುಲ್ಕ ನಿಗದಿಪಡಿಸಲಾಗಿದೆ. ಇದು ನಾಲ್ಕು ದಿನಗಳಿಗೆ ಸೀಮಿತ ಪರೀಕ್ಷೆ. ಉಳಿದಂತೆ 2,500 ರೂ. ಪಾವತಿಸಿದರೆ ರಕ್ತದೊತ್ತಡ, ಮಧುಮೇಹ, ಕೊಲೆಸ್ಟ್ರಾಲ್ ಹಾಗು ಕಿಡ್ನಿ ಕಾರ್ಯ ಕ್ಷಮತೆ ಜೊತೆಗೆ ಹೃದಯ ತಪಾಸಣೆ ಮಾಡಲಾಗುವುದೆಂದರು.

**ಹೃದಯ ರೋಗಿಗಳಿಗೆ ಉಚಿತ ಸಸಿ ವಿತರಣೆ:** ಆಸ್ಪತ್ರೆಯಿಂದ ಗುಣಮುಖರಾಗಿ ಡಿಸ್ಚಾರ್ಜ್ ಆಗುವ ಪ್ರತಿಯೊಬ್ಬ ಹೃದಯ ರೋಗಿಗೂ ಮಲೆನಾಡಿನ ಸಾಂಪ್ರದಾಯಿಕ ಗಿಡದ ಸಸಿಯನ್ನು ಕೊಡುಗೆಯಾಗಿ ನೀಡಲಾಗುತ್ತದೆ. ರೋಗಿಗಳು ಅದನ್ನು ನೆಟ್ಟು ಪೋಷಿಸುವ ಮೂಲಕ ಸಾಮಾಜಿಕ ಜವಾಬ್ದಾರಿ ವಹಿಸಿಕೊಳ್ಳಬೇಕು. ಹೀಗೆ ಸಸಿಯನ್ನು ಪೋಷಿಸಿ ಬೆಳೆಸಿದವರಿಗೆ ಮುಂದಿನ ತಪಾಸಣೆಯ ವೇಳೆ 3 ಸಾವಿರ ರೂ. ವರೆಗೆ ರಿಯಾಯಿತಿ ನೀಡಲಾಗುವುದೆಂದರು. ಹೃದಯ ತಜ್ಞ ಡಾ|| ನಿರೂಪ್, ಆಸ್ಪತ್ರೆ ಆಡಳಿತಾಧಿಕಾರಿ ಪ್ರದೀಪ್ ಹಾಜರಿದ್ದರು.

## ನಾನೇಕೆ ನಾಸ್ತಿಕ ಸಂವಾದದಲ್ಲಿ ಡಾ.ರಾಜಪ್ಪ ದಳವಾಯಿ ಕರೆ

# ವೈಜ್ಞಾನಿಕ ಮನೋಭಾವ, ಪ್ರಶ್ನಿಸುವ ಪ್ರವೃತ್ತಿ ಬೆಳೆಯಲಿ

• ಪ್ರಜೋದಯ ವರದಿ




**ಹಾಸನ:** ಮನುಷ್ಯನಿಗಿಂತ ಧರ್ಮ, ದೇವರು, ದೇವಾಲಯಗಳು ಮತ್ತು ಧಾರ್ಮಿಕ ಸಂಸ್ಥೆಗಳು ಮುಖ್ಯವಾಗುವ ಪರಿಸ್ಥಿತಿ ನಿರ್ಮಾಣವಾಗಬಾರದು. ಮನುಷ್ಯನ ಬದುಕು, ಸ್ವಾತಂತ್ರ್ಯ, ಗೌರವ ಮತ್ತು ವಿಚಾರಶಕ್ತಿಯೇ ಸಮಾಜದ ಕೇಂದ್ರವಾಗಬೇಕೆಂದು ಗ್ರಂಥಾಲಯದ ಸಗಟು ಖರೀದಿ ಸಮಿತಿ ಅಧ್ಯಕ್ಷ ಡಾ.ರಾಜಪ್ಪ ದಳವಾಯಿ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಗತ್ ಸಿಂಗ್ ಜನ್ಮದಿನಾಚರಣೆ ಅಂಗವಾಗಿ ನಡೆದ 'ನಾನೇಕೆ ನಾಸ್ತಿಕ' ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಡತನ, ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳಿಗೆ ದೇವರು ಪರಿಹಾರ ನೀಡುತ್ತಾನೆಂದು ಕಾಯುವುದಕ್ಕಿಂತ, ಅವುಗಳ ಕಾರಣಗಳನ್ನು ಮನುಷ್ಯನೇ ಹುಡುಕಿ ವೈಜ್ಞಾನಿಕ ಪರಿಹಾರ ಕಂಡುಕೊಳ್ಳಬೇಕೆಂದು ಹೇಳಿದರು.

ಭಗತ್ ಸಿಂಗ್ ಅವರ ನಾನು ಏಕೆ ನಾಸ್ತಿಕ ಕೃತಿಯನ್ನು ಕೇವಲ ದೇವರ ನಿರಾಕರಣೆಯ ಬರಹವಾಗಿ ನೋಡಬಾರದು. ಪ್ರಶ್ನಿಸುವುದು, ಸಾಕ್ಷ್ಯ ಹುಡುಕುವುದು ಮತ್ತು ವೈಜ್ಞಾನಿಕವಾಗಿ ಚಿಂತಿಸುವುದು ಅವರ ನಾಸ್ತಿಕತೆಯ ಪ್ರಮುಖ ಅಂಶಗಳಾಗಿವೆ. ಪ್ರತಿಯೊಂದು ಘಟನೆಗೂ ಎಲ್ಲವೂ ಕರ್ಮದ ಫಲ ಅಥವಾ ದೇವರ ಇಚ್ಛೆ ಎಂದು ವಿವರಣೆ ನೀಡುವ ಬದಲು, ಏಕೆ, ಹೇಗೆ, ಇದಕ್ಕೆ ಸಾಕ್ಷ್ಯವೇನು ಎಂದು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಮಾತನಾಡಿ, ನಾಸ್ತಿಕತೆ ಎಂದರೆ ಕೇವಲ ದೇವರನ್ನು ನಂಬದಿರುವುದಲ್ಲ. ಸಾಕ್ಷ್ಯವಿಲ್ಲದ ಅತೀಂದ್ರಿಯ ಅಥವಾ ಅಲೌಕಿಕ ಶಕ್ತಿಗಳನ್ನು ಒಪ್ಪಿಕೊಳ್ಳದ ವೈಚಾರಿಕ ನಿಲುವಾಗಿದೆ. ವಿಚಾರವಾದದ ಉದ್ದೇಶ ಮನುಷ್ಯನನ್ನು ಕಡೆಗಣಿಸುವುದಲ್ಲ, ಮನುಷ್ಯನನ್ನೇ ಕೇಂದ್ರದಲ್ಲಿಟ್ಟುಕೊಂಡು ಸಮಾಜವನ್ನು ನೋಡುವುದಾಗಿದೆ. ಜಾತಿ, ಧರ್ಮ, ಲಿಂಗ ಮತ್ತಿತರ ಆಧಾರಗಳ ಮೇಲಿನ ವಿಭಜನೆಗಿಂತ ಸಮಾನತೆ ಮತ್ತು ಮಾನವೀಯತೆಯನ್ನು ಬೆಳೆಸಬೇಕು ಎಂದರು.

**ವೈಜ್ಞಾನಿಕ ಚಿಂತನೆಗೆ ಆದ್ಯತೆ ನೀಡಲು ಕರೆ**

ನಾಸ್ತಿಕತೆ ಎಂದರೇನು ಎಂಬ ಮೊದಲ ಗೋಷ್ಠಿಯಲ್ಲಿ ಕೆ.ಎಸ್. ರವಿಕುಮಾರ್, ಕೆ.ರೋಹಿತ್ ಹಾಗು ಡಾ.ಕೆ.ಸಿ.ಸುಮಲತಾ ವಿಚಾರ ಮಂಡಿಸಿದರು. ಮಾನವ ನಾಗರಿಕತೆಯ ಆರಂಭಿಕ ಹಂತಗಳಲ್ಲಿ ಪ್ರಕೃತಿಯ ಅನಿಶ್ಚಿತತೆ, ಭಯ ಮತ್ತು ಅಜ್ಞಾನದಿಂದ ವಿವಿಧ ಅತೀಂದ್ರಿಯ ಶಕ್ತಿಗಳ ಕಲ್ಪನೆಗಳು ರೂಪುಗೊಂಡಿರಬಹುದು. ನಾಸ್ತಿಕ ಚಿಂತನೆ ಇಂತಹ ನಂಬಿಕೆಗಳನ್ನು ಪ್ರಶ್ನಿಸುವ ಮತ್ತು ವೈಜ್ಞಾನಿಕವಾಗಿ ಪರಿಶೀಲಿಸುವ ಅವಕಾಶ ನೀಡುತ್ತದೆಂದು ಹೇಳಿದರು. ಚಾರ್ಲ್ಸ್ ಡಾರ್ವಿನ್ ಅವರ ವಿಕಾಸವಾದ ಹಾಗೂ ಬ್ರಹ್ಮಾಂಡದ ಕುರಿತು ಆಧುನಿಕ ವಿಜ್ಞಾನ ನೀಡಿರುವ ತಿಳುವಳಿಕೆಯ ಬಗ್ಗೆಯೂ ಚರ್ಚಿಸಲಾಯಿತು.

> ಭಗತ್ ಸಿಂಗ್ ಅವರನ್ನು ಕೇವಲ ಕ್ರಾಂತಿಕಾರಿ ಅಥವಾ ಸ್ವಾತಂತ್ರ್ಯ ಹೋರಾಟಗಾರನಾಗಿ ನೋಡದೆ, ಅವರ ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವವನ್ನು ಅರ್ಥಮಾಡಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಹಾಗೂ ವೈಜ್ಞಾನಿಕವಾಗಿ ಪರಿಶೀಲಿಸುವ ಮನೋಭಾವ ಬೆಳೆಸುವ ಅಗತ್ಯವಿದೆ.
> -ಡಾ.ಹೆಚ್.ಆರ್.ಸ್ವಾಮಿ, ನೇಗಿಲ ಯೋಗಿ ಟ್ರಸ್ಟ್ ಅಧ್ಯಕ್ಷ

ಡಾ.ಪ್ರವೀಣ್ ರಾಮಚಂದ್ರ ಅವರು 'ಸಾಮಾಜಿಕ ನಿರ್ಮಿತಿ' ಪರಿಕಲ್ಪನೆಯನ್ನು ವಿವರಿಸಿ ದರು. ಭಾರತದಲ್ಲಿ ನಾಸ್ತಿಕತೆಯ ಇತಿಹಾಸ ಕುರಿತು ಡಾ.ಬಿ.ಆರ್.ಮಂಜುನಾಥ್ ಮಾತನಾಡಿದರು. ಡಾ.ಶಶಿಧರ್ ಬೆಳಗಿ ಅವರು ವೈಜ್ಞಾನಿಕ ಮನೋಭಾವ ಮತ್ತು ಮೂಢನಂಬಿಕೆಗಳ ನಡುವಿನ ವ್ಯತ್ಯಾಸ ವಿವರಿಸಿದರು.

ನಾಸ್ತಿಕತೆ ಮತ್ತು ವೈಜ್ಞಾನಿಕ ಮನೋಭಾವ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಎ.ಸಾವಿತ್ರಿ, ಮಹಿಳೆಯರ ಆರೋಗ್ಯ ಕ್ಷೇತ್ರದಲ್ಲಿ ಮೂಢನಂಬಿಕೆಗಳಿಂದ ವೈದ್ಯಕೀಯ ಚಿಕಿತ್ಸೆ ವಿಳಂಬವಾಗುವ ಸಂದರ್ಭಗಳ ಕುರಿತು ಅನುಭವ ಹಂಚಿಕೊಂಡರು.

## ಎಐ ಯುಗದಲ್ಲಿ ನರ್ಸಿಂಗ್, ಪ್ಯಾರಾ ಮೆಡಿಕಲ್‌ಗೆ ಬೇಡಿಕೆ

» ಮೊದಲನೇ ಪುಟದಿಂದ

ಕೇವಲ ಪದವಿ ನೀಡುವ ಕೇಂದ್ರಗಳಾಗದೆ ಸಮಾಜಕ್ಕೆ ಸೇವೆ ಸಲ್ಲಿಸುವ ಸಮರ್ಥ ವ್ಯಕ್ತಿಗಳನ್ನು ರೂಪಿಸುವ ಕೇಂದ್ರಗಳಾಗಬೇಕು. ಪರಸ್ಪರ ಮೈತ್ರಿ ಭಾವನೆಯಿಂದ ಬದುಕುವುದೇ ಜೀವನದ ಸಾರ್ಥಕತೆ. ನರ್ಸ್‌ಗಳು ಕರುಣೆಯ ಪ್ರತಿನಿಧಿಗಳಾಗಿ, ಮಾನವ ಕುಲದ ಸೇವಕರಾಗಿ ಕಾರ್ಯನಿರ್ವಹಿಸುತ್ತಾರೆ. ರೋಗಿಗಳ ಆರೈಕೆ ಮತ್ತು ಆರೋಗ್ಯ ಸೇವೆಯಲ್ಲಿ ಅವರ ಪಾತ್ರ ಅನನ್ಯವಾಗಿದೆ ಎಂದು ಹೇಳಿದರು.

ನೂತನ ಕಟ್ಟಡದ ಶಿಲಾನ್ಯಾಸವು ಕೇವಲ ಕಟ್ಟಡ ನಿರ್ಮಾಣಕ್ಕೆ ಅಡಿಪಾಯ ಹಾಕುವುದಲ್ಲ, ಬದಲಾಗಿ ಭವಿಷ್ಯದ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿದಂತಾಗಿದೆ. ನರ್ಸಿಂಗ್ ಶಿಕ್ಷಣ ವ್ಯವಸ್ಥೆ ಅತ್ಯಂತ ಮಹತ್ವದ್ದಾಗಿದ್ದು, ರೋಗಿಗಳನ್ನು ಕರುಣೆ, ವಾತ್ಸಲ್ಯ ಮತ್ತು ಆತ್ಮೀಯತೆಯಿಂದ ಆರೈಕೆ ಮಾಡುವವರು ನರ್ಸ್‌ಗಳು. ಕರುಣೆ, ಮಾತೃತ್ವದ ಗುಣ ಹಾಗೂ ಸೇವಾ ಮನೋಭಾವ ನರ್ಸಿಂಗ್ ವೃತ್ತಿಯ ಪ್ರಮುಖ ಅಂಶಗಳಾಗಿವೆ ಎಂದು ತಿಳಿಸಿದರು.

ಶ್ರವಣಬೆಳಗೊಳ ಕ್ಷೇತ್ರದಲ್ಲಿ ಸಾವಿರಾರು ವರ್ಷಗಳಿಂದ ಗುರುಕುಲ ಪರಂಪರೆ ಇದೆ. ಜ್ಞಾನಾರ್ಜನೆಗೆ ಧಾರ್ಮಿಕ ಶಿಕ್ಷಣವನ್ನು ನೀಡಲಾಗುತ್ತದೆ. 45 ವರ್ಷ ಹಿಂದೆ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಲೌಕಿಕ ಶಿಕ್ಷಣವನ್ನು ಗ್ರಾಮೀಣ ಭಾಗದ ಮಕ್ಕಳಿಗೆ ನೀಡಬೇಕೆಂಬ ಉದ್ದೇಶದಿಂದ 10 ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದಾರೆ. ಅದರ ಮುಂದುವರೆದ ಭಾಗವಾಗಿ ಬಿಎಸ್ಸಿ ನರ್ಸಿಂಗ್, ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭ ಮಾಡಲಾಗಿದೆ ಎಂದು ತಿಳಿಸಿದರು.

ಕ್ಷೇತ್ರದ ಶಾಸಕ ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ ಕುಲಸಚಿವ ಶ್ರೀಕಾಂತ್ ಫುಲಾರೆ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ ಪರೀಕ್ಷಾ ಮಂಡಳಿ ಪರೀಕ್ಷಾ ಮೇಲ್ವಿಚಾರಕ ಎಂ.ಎಸ್.ಶರತ್ ಬಾಬು, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಬಿ.ಆರ್ .ಯುವರಾಜ್, ಎ.ಸಿ.ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

## ರೈತರ ಸಾಲ ಮನ್ನಾ: ಕೇಂದ್ರವೇ ನಿರ್ಧಾರ ಕೈಗೊಳ್ಳಲಿ

» ಮೊದಲನೇ ಪುಟದಿಂದ

ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸೇರಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದು. ಸಮೀಕ್ಷೆ ಪೂರ್ಣಗೊಂಡ ಬಳಿಕ ಉಂಟಾಗಿರುವ ನಷ್ಟದ ಕುರಿತು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಬರ ಪರಿಸ್ಥಿತಿಯನ್ನು ಎದುರಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ ಎಂದರು.

**ಗ್ಯಾರಂಟಿಗಳಿಂದ ಸಾಮಾಜಿಕ ನ್ಯಾಯ**

ಗ್ಯಾರಂಟಿ ಯೋಜನೆಗಳಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ ಎಂಬ ಕೆಲ ಕಾಂಗ್ರೆಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿ, ಗ್ಯಾರಂಟಿ ಯೋಜನೆಗಳು ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ಜಾರಿಗೊಳಿಸಿರುವ ಕಾರ್ಯಕ್ರಮಗಳಾಗಿವೆ. ಸರ್ಕಾರಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಜವಾಬ್ದಾರಿ ಇರುತ್ತದೆ. ಬಡವರು ತಮ್ಮ ಬದುಕಿನಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇಂತಹ ಬೆಲೆ ಏರಿಕೆಯ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳು ಇಲ್ಲದಿದ್ದರೆ ಅವರ ಬದುಕು ಮತ್ತಷ್ಟು ದುಸ್ತರವಾಗುತ್ತಿತ್ತು. ಈ ಹಿನ್ನಲೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆಂದು ಹೇಳಿದರು.

ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಕಟ್ಟಡ ಮತ್ತು ಚರಂಡಿಗಳ ನಿರ್ಮಾಣವಷ್ಟೇ ಅಲ್ಲ. ಸಾಮಾಜಿಕ ಅಭಿವೃದ್ಧಿಯೂ ಆಗಬೇಕು. ಈ ಉದ್ದೇಶದಿಂದ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳನ್ನು ಶೇ.90ರಷ್ಟು ಜನರು ಒಪ್ಪಿಕೊಂಡಿದ್ದಾರೆ. ಯೋಜನೆಗಳು ಮುಂದುವರಿಯಬೇಕೆಂಬ ಅಭಿಪ್ರಾಯ ಜನಸಾಮಾನ್ಯರಲ್ಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸುವ ಮತ್ತು ಚರ್ಚೆ ನಡೆಸುವ ಸ್ವಾತಂತ್ರ್ಯವಿದೆ. ಆದರೆ, ಗ್ಯಾರಂಟಿ ಯೋಜನೆಗಳು ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯ ಕ್ರಮಗಳೆಂಬ ನಿಲುವಿನೊಂದಿಗೆ ಸರ್ಕಾರ ಅವುಗಳನ್ನು ಜಾರಿಗೊಳಿಸಿದೆ ಎಂದು ಸ್ಪಷ್ಟಪಡಿಸಿದರು.

## ಸಿನಿಮೀಯ ಶೈಲಿಯ ಕಳ್ಳತನ: ಅಂತರ ರಾಜ್ಯ ಕಳ್ಳರ ಬಂಧನ

• ಪ್ರಜೋದಯ ವರದಿ




**ಸಕಲೇಶಪುರ:** ಪಟ್ಟಣದಲ್ಲಿ ಮಹಿಳೆಯರ ಸರ ದೋಚಿ ಭೀತಿ ಹುಟ್ಟಿಸಿದ್ದ ಅಂತರ ರಾಜ್ಯದ ಇಬ್ಬರು ಸರಗಳ್ಳರನ್ನು ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ರಾಕಿ ಬುಲ್ ಹುಸೇನ್ ಹಾಗು ಗಾಜಿಬುರ್ ರೆಹಮಾನ್ ಬಂಧಿತರು. ಕಾಫಿ ತೋಟದ ಕಾರ್ಮಿಕರಾಗಿ ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದ ಇವರು ಕಳ್ಳತನವನ್ನೇ ನಿತ್ಯ ಕಾಯಕವಾಗಿಸಿಕೊಂಡಿದ್ದರು. ಕೆಲವು ದಿನಗಳ ಹಿಂದೆ ಪಟ್ಟಣದ ಹೊಳೆ ಮಲ್ಲೇಶ್ವರ ದೇವಸ್ಥಾನದ ಸಮೀಪ ಬ್ರಾಹ್ಮಣರ ಬೀದಿ ನಿವಾಸಿ, ನಿವೃತ್ತ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಶಾಂತಪ್ಪ ಅವರ ಪತ್ನಿ ರಾಣಿಯಮ್ಮ ಅವರು ತೆರಳುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಖದೀಮರು ಏಕಾಏಕಿ ಕೊರಳಿನಲ್ಲಿದ್ದ 45 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಘಟನೆ ಪಟ್ಟಣದಲ್ಲಿ ತೀವ್ರ ಆತಂಕ ಸೃಷ್ಟಿಸಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಹಳೆಯ ಪ್ರಕರಣಗಳಲ್ಲಿ ಭಾಗಿಯಾಗಿ ದ್ದ ಶಂಕಿತರ ಚಲನವಲನದ ಮೇಲೆ ಕಣ್ಣಿಟ್ಟು ವಿಶೇಷ ಜಾಲ ರೂಪಿಸಿದ್ದರು.

**ಹೇಮಾವತಿ ಸೇತುವೆ ಬಳಿ ನಾಕಾ ಬಂದಿ**

ಆರೋಪಿಗಳು ಮಂಗಳವಾರ ಮುಂಜಾನೆ ಮತ್ತೆ ಸಕಲೇಶಪುರ ಪಟ್ಟಣ ಪ್ರವೇಶಿಸುತ್ತಿರುವ ಬಗ್ಗೆ ಆಧುನಿಕ ತಂತ್ರಜ್ಞಾನ ಹಾಗು ನೆಟ್‌ವರ್ಕ್‌ನ ಸಹಾಯ ದಿಂದ ಪೊಲೀಸ ರಿಗೆ ಖಚಿತ ಸುಳಿವು ಲಭ್ಯವಾ ಗಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಪಟ್ಟಣದ ಪ್ರಮುಖ ಪ್ರವೇಶ ದ್ವಾರಗಳಲ್ಲಿ ನಾಕಾಬಂದಿ ಹಾಕಿ ಹೊಂಚು ಹಾಕಿ ಕುಳಿತಿದ್ದರು. ಬೆಳಿಗ್ಗೆ ಸುಮಾರು 6 ಗಂಟೆಗೆ ಹೇಮಾವತಿ ಸೇತುವೆ ಮೂಲಕ ಆರೋಪಿಗಳು ಪಟ್ಟಣ ಪ್ರವೇಶಿಸುತ್ತಿದ್ದಂತೆ ಸಿವಿಲ್ ಉಡುಪಿನಲ್ಲಿದ್ದ ಪೊಲೀಸರು ಖಾಸಗಿ ವಾಹನದಲ್ಲಿ ಅವರನ್ನು ಬೆನ್ನಟ್ಟಿದ್ದಾರೆ.

ಹಳೆ ಬಸ್ ನಿಲ್ದಾಣದ ಸಮೀಪ ಪೊಲೀಸರನ್ನು ಕಂಡು ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಗಳು, ತಮ್ಮ ಬೈಕ್‌ನ್ನು ಪೊಲೀಸರ ವಾಹನಕ್ಕೆ ಡಿಕ್ಕಿ ಹೊಡೆಸಿದ್ದಾರೆ. ಡಿಕ್ಕಿಯ ರಭಸಕ್ಕೆ ಓರ್ವ ಆರೋಪಿ ಗಾಯಗೊಂಡು ರಸ್ತೆಗೆ ಬಿದ್ದಿದ್ದು, ಆತನನ್ನು ಪೊಲೀಸರು ತಕ್ಷಣ ವಶಕ್ಕೆ ಪಡೆದರು. ಮತ್ತೊಬ್ಬ ಆರೋಪಿ ಕತ್ತಲಿನಲ್ಲಿ ಅಲ್ಲಿಂದ ಕಾಲ್ಕಿತ್ತಿದ್ದ.

ಪರಾರಿಯಾಗಿದ್ದ ಆರೋಪಿ ಪೊಲೀಸರ ಕಣ್ಣಿಗೆ ಮಣ್ಣೆರಚಲು ತಕ್ಷಣವೇ ಬಟ್ಟೆ ಬದಲಾಯಿಸಿಕೊಂಡು, ಘಟನಾ ಸ್ಥಳಕ್ಕೆ ಮರಳಿ ಏನೂ ಅರಿಯದವನಂತೆ ಸಾರ್ವಜನಿಕರ ಮಧ್ಯೆ ನಿಂತು ತಮಾಷೆ ನೋಡುವ ನಾಟಕವಾಡಿದ್ದಾನೆ. ಆದರೆ, ಸರ್ಕಲ್ ಇನ್‌ಸ್ಪೆಕ್ಟರ್ ಹಾಗು ಸಿಬ್ಬಂದಿ ಆತನ ಸಂಶಯಾಸ್ಪದ ನಡವಳಿಕೆಯನ್ನು ಕ್ಷಣಾರ್ಧದಲ್ಲಿ ಗುರುತಿಸಿ ತಪ್ಪಿಸಿಕೊಳ್ಳಲು ಅವಕಾಶ ನೀಡದೆ ಸಾರ್ವಜನಿಕರ ಎದುರೇ ಹೆಡೆಮುರಿ ಕಟ್ಟಿದ್ದಾರೆ.

## 11 ದಿನಗಳ ಬಳಿಕ ನವ ವಿವಾಹಿತೆ ಶವ ಪತ್ತೆ

• ಪ್ರಜೋದಯ ವರದಿ



**ಹಾಸನ:** ನಿಗೂಢವಾಗಿ ನಾಪತ್ತೆಯಾಗಿದ್ದ ನವ ವಿವಾಹಿತೆ ಪ್ರಿಯಾಂಕಾ ಮೃತದೇಹ 11 ದಿನಗಳ ಬಳಿಕ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕೋಲಾಳ ಗ್ರಾಮದ ಕೆರೆಯಲ್ಲಿ ಪತ್ತೆಯಾಗಿದೆ.

ಸೆ.19ರ ರಾತ್ರಿ ಪತಿ ಜೊತೆಗಿದ್ದ ಪ್ರಿಯಾಂಕಾ ಚನ್ನರಾಯಪಟ್ಟಣ ತಾಲ್ಲೂಕಿನ ಚಿಕ್ಕನಾಯಕನ ಹಳ್ಳಿ ಬಳಿ ಹೇಮಾವತಿ ನಾಲೆಗೆ ಹಾರಿದ್ದರು. ಅಂದಿನಿಂದಲೂ ಮೃತದೇಹಕ್ಕಾಗಿ ಹುಡುಕಾಟ ನಡೆಸಲಾಗುತ್ತಿತ್ತು. ಕಾಲುವೆ ನೀರು ನಿಲ್ಲಿಸಿ ಸುರಂಗ, ಕೆರೆ ಎಲ್ಲೆಡೆ ಸಂಬಂಧಿಕರು ಶೋಧ ನಡೆಸಿದ್ದರು. ತುರುವೇಕೆರೆ, ತಿಪಟೂರು ಭಾಗದಲ್ಲಿ ಡ್ರೋನ್ ಮೂಲಕ ಪೊಲೀಸರು ಪ್ರಿಯಾಂಕಾಗಾಗಿ ಹುಡುಕಾಡಿದ್ದರು.

**ಆರೋಪ-ಪ್ರತ್ಯಾರೋಪ**

ಬಾಗೂರು ಗ್ರಾಮದ ಕೃಷ್ಣಸ್ವಾಮಿ -ಶೋಭ ದಂಪತಿ ಪುತ್ರಿಯಾಗಿದ್ದ ಪ್ರಿಯಾಂಕಾಳನ್ನು 8 ತಿಂಗಳ ಹಿಂದೆ ಕುರುವಂಕ ಗ್ರಾಮದ ರಾಜಶೇಖರ ಜೊತೆ ವಿವಾಹ ಮಾಡಿ ಕೊಡಲಾಗಿತ್ತು. ಪತ್ನಿ ಎರಡೂವರೆ ತಿಂಗಳ ಗರ್ಭಿಣಿ ಆಗಿದ್ದರೂ ವರದಕ್ಷಿಣೆಗಾಗಿ ಪತಿ ಕಿರುಕುಳ ನೀಡುತ್ತಿದ್ದ. ಈ ಬಗ್ಗೆ ರಾಜಿ ಸಂಧಾನವೂ ನಡೆದಿತ್ತು. ಈ ನಡುವೆ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ರಾಜಶೇಖರನೇ ಹೆಂಡತಿಯನ್ನು ಕೊಲೆ ಮಾಡಿದ್ದಾನೆಂದು ಪ್ರಿಯಾಂಕಾ ಪೋಷಕರು ದೂರಿದ್ದರು.

ಮತ್ತೊಂದೆಡೆ ಪ್ರಿಯಾಂಕಾ ಹಾಗು ಆಕೆಯ ಪೋಷಕರ ವಿರುದ್ಧವೇ ರಾಜಶೇಖರ ಮತ್ತು ಕುಟುಂಬಸ್ಥರು ದೂರಿದ್ದರು. ಆಕೆಗೆ ಈಗಾಗಲೇ ಮೊದಲೇ ಒಂದು ಮದುವೆಯಾಗಿತ್ತು ಎಂಬ ಸತ್ಯವನ್ನು ಮುಚ್ಚಿಟ್ಟು ಮದುವೆ ಮಾಡಿಕೊಡಲಾಗಿದೆ. ರಾಜಶೇಖರ ಜೊತೆ ಮದುವೆಯಾಗುತ್ತಿದ್ದ ದಿನವೇ ಆಕೆಯ ಮೊದಲ ಗಂಡ ಪೊಲೀಸರ ಜೊತೆ ಕಲ್ಯಾಣ ಮಂಟಪಕ್ಕೇ ಬಂದಿದ್ದ. ಮಗಳು ಮೊದಲ ಗಂಡನ ಜೊತೆ ಓಡಿ ಹೋಗುತ್ತಾಳೆಂಬ ಆತುರದಲ್ಲಿ ಆಕೆಯ ಪೋಷಕರು ವಿಚಾರ ಮುಚ್ಚಿಟ್ಟು ಮದುವೆ ಮಾಡಿದ್ದಾರೆ. ಮಗಳು ಮದುವೆಗೆ ಒಪ್ಪದಿದ್ದಾಗ ತಂದೆ–ತಾಯಿ ವಿಷದ ಬಾಟಲಿ ಹಿಡಿದು ಬೆದರಿಸಿ, ಒತ್ತಾಯಪೂರ್ವಕವಾಗಿ ರಾಜಶೇಖರ ಜೊತೆ ಮದುವೆಗೆ ಒಪ್ಪಿಸಿದ್ದರೆಂದು ಆರೋಪಿಸಿದ್ದರು.

## ಬೇರೆಯವರಿಗೆ ಬೆಂಬಲ ವಿರೋಧಿಸಿ ಹಲ್ಲೆ

• ಪ್ರಜೋದಯ ವರದಿ

**ಅರಸೀಕೆರೆ:** ಜೈಲಿನಲ್ಲಿದ್ದಾಗ ಬೇರೆಯವರಿಗೆ ಬೆಂಬಲಿಸಿದ ಎಂಬ ದ್ವೇಷದಿಂದ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದ ಗರುಡನಗಿರಿ ರಸ್ತೆಯಲ್ಲಿ ಮಂಗಳವಾರ ನಡೆದಿದೆ. ತಾಲ್ಲೂಕಿನ ಕೆರೆಹಳ್ಳಿಯ ಸಂಜಯ್ ನಾಯ್ಕ್ ಎಂಬುವವರ ಮೇಲೆ ನಗರದ ಪಾಣಿ ಎಂಬಾತ ಹಲ್ಲೆ ಮಾಡಿದ್ದಾನೆ ಎನ್ನಲಾಗಿದೆ.

ಡೆಕೋರೇಷನ್ ಕೆಲಸ ಮಾಡಿಕೊಂಡಿರುವ ಸಂಜಯ್‌ಗೆ ಪಾಣಿ ಹಲವು ವರ್ಷಗಳಿಂದ ಸ್ನೇಹಿತ. ಅಪರಾಧ ಪ್ರಕರಣದಡಿ ಜೈಲು ಪಾಲಾಗಿದ್ದ ಪಾಣಿ ಇತ್ತೀಚೆಗೆ ಬಿಡುಗಡೆಯಾಗಿದ್ದ. ಕಾರಾಗೃಹದಲ್ಲಿದ್ದಾಗ ತನ್ನ ಬೆಂಬಲಕ್ಕೆ ನಿಲ್ಲದೆ ಬೇರೆಯವರ ಜೊತೆ ಓಡಾಡಿಕೊಂಡಿದ್ದನೆಂದು ಸಂಜಯ್ ಮೇಲೆ ದ್ವೇಷ ಸಾಧಿಸುತ್ತಿದ್ದ. ಮಂಗಳವಾರ ಮಧ್ಯಾಹ್ನ ಬೈಕ್‌ನಲ್ಲಿ ಸಂಜಯ್ ಹೋಗುತ್ತಿದ್ದಾಗ ಅಡ್ಡಹಾಕಿ ತಡೆದ ಪಾಣಿ ಹಾಗು ಇನ್ನೊಬ್ಬ ಅದೇ ವಿಚಾರ ಪ್ರಸ್ತಾಪಿಸಿ ಜಗಳ ಶುರು ಮಾಡಿದ್ದಾನೆ. ನಂತರ ಕೈಯಲ್ಲಿದ್ದ ಚಾಕುವಿನಿಂದ ಬೆನ್ನಿಗೆ ಇರಿದಿದ್ದಾನೆ. ತೀವ್ರ ಅಸ್ವಸ್ಥಗೊಂಡ ಸಂಜಯ್ ಕುಸಿದು ಬೀಳುತ್ತಿದ್ದಂತೆ ಅಲ್ಲಿಂದ ಪರಾರಿಯಾಗಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹ್ಯಾಂಡ್ ಎಂಬ್ರಾಯ್ಡರಿ ಕೌಶಲ್ಯ ಉಳಿಸಿ ಬೆಳೆಸಬೇಕು

» ಮೊದಲನೇ ಪುಟದಿಂದ

ಬೇಕು. ತಮ್ಮ ಉತ್ಪನ್ನಗಳ ಕುರಿತು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಕೈಗೊಂಡು ಮಾರುಕಟ್ಟೆ ವಿಸ್ತರಿಸಿಕೊಳ್ಳಬೇಕು. ಗಳಿಸುವ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಬೇಕು. ಮುಂದಿನ ದಿನಗಳಲ್ಲಿ ಸರ್ಕಾರದ ಯೋಜನೆಯ ಲಾಭ ಪಡೆಯಲು ನೆರವಾಗುತ್ತದೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಪೂರ್ಣಿಮಾ ಅವರು, 1997ರಲ್ಲಿ ನಂಜಪ್ಪ ಶೆಟ್ಟಿ ಅವರು ಸಂಸ್ಥೆಯನ್ನು ಸ್ಥಾಪಿಸಿದ್ದು, ಸ್ವಾವಲಂಬನೆ, ಮಹಿಳಾ ಸಬಲೀಕರಣ, ಉದ್ಯೋಗ, ಡಿಜಿಟಲ್ ಸಾಕ್ಷರತೆ ಹಾಗು ಆರೋಗ್ಯ ಜಾಗೃತಿ ಕ್ಷೇತ್ರಗಳಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದರು.

ಸಂಸ್ಥೆಯ ಮೂಲಕ 1,359 ಸಂಘಗಳಿಗೆ 65 ಕೋ.ರೂ. ಸಾಲ ವಿತರಿಸಲಾಗಿದ್ದು, ನಬಾರ್ಡ್ ಸಹಯೋಗದಲ್ಲಿ 935 ಜಂಟಿ ಹೊಣೆಗಾರಿಕೆ ಗುಂಪುಗಳಿಗೆ 45 ಕೋ.ರೂ. ಸಾಲ ಒದಗಿಸಲಾಗಿದೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿಯೂ ಸಾಲ ಮರುಪಾವತಿಯಲ್ಲಿ ಉತ್ತಮ ಮಟ್ಟ ಕಾಯ್ದುಕೊಳ್ಳಲಾಗಿದೆ. 278 ಫಲಾನುಭವಿಗಳಿಗೆ ಡಿಜಿಟಲ್ ಸೇವಾ ಕೇಂದ್ರ ಆರಂಭಿಸಲು ನೆರವು ನೀಡಲಾಗಿದೆ. ಆರೋಗ್ಯ ಇಲಾಖೆಯ ಸಹಯೋಗದಲ್ಲಿ ರಕ್ತಹೀನತೆ ಮುಕ್ತ ಭಾರತ ಅಭಿಯಾನದಡಿ ಗ್ರಾಮೀಣ ಪ್ರದೇಶಗಳಲ್ಲಿ 1.40 ಲಕ್ಷ ಜನರನ್ನು ತಪಾಸಣೆಗೆ ಒಳಪಡಿಸಲಾಗಿದ್ದು, ರಕ್ತಹೀನತೆ ಕಂಡುಬಂದವರಿಗೆ ಅಗತ್ಯ ನೆರವು ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಹರ್ಷಿತ ಸಂಸ್ಥೆ ಅಧ್ಯಕ್ಷ ನಂಜಪ್ಪ ಶೆಟ್ಟಿ, ಕೆನರಾ ಬ್ಯಾಂಕ್ ವ್ಯವಸ್ಥಾಪಕಿ ಲತಾ ಸರಸ್ವತಿ, ಬ್ಯಾಂಕ್ ನಿರ್ದೇಶಕ ಅಶೋಕ್, ಶೈಲಜಾ, ನವೀನ್, ಪರಮೇಶ್ವರ್ ಮತ್ತಿತರರು ಉಪಸ್ಥಿತರಿದ್ದರು.

## ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಸ್ಥಾಪನಾ ದಿನಾಚರಣೆ

# ಜ್ಞಾನಿಗಳನ್ನು ಸೃಷ್ಟಿಸುವ ಕಾರ್ಖಾನೆಯೇ ಕಾಲೇಜು

• ಪ್ರಜೋದಯ ವರದಿ




**ಹಾಸನ:** ಜ್ಞಾನ ಎಂಬುದು ಒಂದು ಸಂಪತ್ತು. ಜ್ಞಾನವನ್ನು ಪಡೆಯುವ ಜ್ಞಾನಿಗಳನ್ನು ಸೃಷ್ಟಿಸುವ ಕಾರ್ಖಾನೆಯೇ ಕಾಲೇಜು ಎಂದು ಎಂ.ಜಿ. ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಚಾಲಕ ಯೋಗೇಶ್ ಅವರು ಹೇಳಿದರು.

ನಗರದ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಈ ಯೋಜನೆಯನ್ನು ಮಹಾತ್ಮ ಗಾಂಧಿಯವರು ಜಾರಿಗೆ ತಂದರು. ಈ ಸಂಘಟನೆ ಪ್ರಾರಂಭವಾದದ್ದು 1946. ಈ ಸಂಘಟನೆಯ ಪ್ರಮುಖ ಉದ್ದೇಶ ಎಂದರೆ ಯುವಕರನ್ನು ಪ್ರಗತಿಯ ಕಡೆಗೆ ಕೊಂಡೊಯ್ಯುವು ದಾಗಿದೆ ಎಂದರು.

ಪ್ರಾರಂಭದ 33 ವಿಶ್ವವಿದ್ಯಾನಿಲಯಗಳಲ್ಲಿ 4,000 ವಿದ್ಯಾರ್ಥಿಗಳು ಸೇರ್ಪಡೆಯಾದರು. ನಂತರದಲ್ಲಿ ಈ ಸಂಘಟನೆ ಅಧಿಕೃತವಾಗಿ ಜಾರಿಗೊಂಡ ನಂತರ ಭಾರತದಲ್ಲಿ 537 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ 3 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ಸಂಘಟನೆಯಲ್ಲಿ ಕಾರ್ಯನಿರ್ವಹಿ ಸುತ್ತಿದ್ದಾರೆ. ಹಾಸನದಲ್ಲಿರುವ 34 ಕಾಲೇಜುಗಳಲ್ಲಿ 56 ಎನ್.ಎಸ್.ಎಸ್. ಘಟಕಗಳಿವೆ. ಅದರ ನಿರ್ವಹಣೆಯನ್ನು ಕೇಂದ್ರ ಸರ್ಕಾರ ವಹಿಸಿಕೊಂಡಿದೆ. 100 ವಿದ್ಯಾರ್ಥಿಗಳು ಒಂದು ಘಟಕ ವಾಗುತ್ತಾರೆ. ಅದರಲ್ಲಿ 48 ವಿದ್ಯಾರ್ಥಿಗಳನ್ನು ಸಂಘಕ್ಕೆ ಆಯ್ಕೆ ಮಾಡಲಾಗುತ್ತದೆ. ನಿಸ್ವಾರ್ಥವಾಗಿ ಸೇವೆ ಸಲ್ಲಿಸುವುದನ್ನು ಕಲಿಯುತ್ತೇವೆ. ಸಂಘಟನೆ ವಿದ್ಯಾರ್ಥಿಗಳಲ್ಲಿ ಧೈರ್ಯ, ನಾಯಕತ್ವ ಗುಣವನ್ನು ಬೆಳೆಸುತ್ತದೆ ಎಂದರಲ್ಲದೆ, ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೆ ಎನ್.ಎಸ್.ಎಸ್.ನಲ್ಲಿ ಕೆಲಸ ಮಾಡಬೇಕು. ಇಂದು ಕಷ್ಟಪಟ್ಟರೆ ಮುಂದೆ ಸುಖ ಪಡೆಯ ಬಹುದು ಹಾಗೆಯೇ ಇದು ನಮ್ಮ ಬದುಕಿನ ಮಹತ್ವದ ಬದಲಾವಣೆ ಮಾಡುತ್ತದೆ ಎಂದರು.

ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳಬೇಕು. ಎನ್.ಎಸ್.ಎಸ್. ಎಂಬುದು ವಿದ್ಯಾರ್ಥಿಗಳಿಗೆ ಶಿಸ್ತು, ವೇದಿಕೆ ಮೇಲೆ ಮಾತನಾಡುವ ಶೈಲಿ, ಓದುವ ಶೈಲಿ, ಹಾಡುವುದು, ಬದುಕಿನ ಕಲೆಗಾರಿಕೆ ಸೇರಿ ಜೀವನದ ಪ್ರತಿಯೊಂದು ವಿಷಯವನ್ನು ಕಲಿಸುತ್ತದೆ. ವಿದ್ಯಾರ್ಥಿಗಳು ಹಳ್ಳಿಯ ಪರಿಸರ ಅರಿತುಕೊಳ್ಳಬೇಕು ಹಾಗೂ ಅಲ್ಲಿಯ ಜೀವನ ಶೈಲಿ ತಿಳಿದುಕೊಳ್ಳಬೇಕು ಈ ಹಿನ್ನಲೆಯಲ್ಲಿ ನಮ್ಮ ಕಾಲೇಜಿನ ವತಿಯಿಂದ ಹಳ್ಳಿಗಳಲ್ಲಿ ಶಿಬಿರ ಹಾಕಿಸಬೇಕು ಅದಕ್ಕೆ ಕಾಲೇಜಿನಿಂದಲೂ ಸಹಕಾರ ನೀಡುತ್ತೇವೆ ಎಂದರಲ್ಲದೆ, 2 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಯಾಗಿ ಸಲ್ಲಿಸಿದ ಸೇವೆಯ ಬಗ್ಗೆ ಮಾಹಿತಿ ತಿಳಿಸಿದರು.

ಎನ್.ಎಸ್.ಎಸ್. ಸಂಚಾಲಕರಾದ ಡಾ.ಜಿ.ಸುನೀತ, ಆಂಗ್ಲ ವಿಭಾಗದ ಮುಖ್ಯಸ್ಥ ಮೋಹನ್‌ಕುಮಾರ್, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಎಸ್.ಜಿ.ರೇಖಾ, ಐ.ಕ್ಯೂ.ಎ.ಸಿ. ಘಟಕದ ಸಂಚಾಲಕ ಡಾ.ಕಾಂತೇಶ್, ಗಣಕವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಸುರೇಶ್‌ಕುಮಾರ್, ಪ್ರಾಧ್ಯಕರು, ಸಿಬ್ಬಂದಿ ಹಾಜರಿದ್ದರು.

## ಎಫ್‌ಕೆಸಿಸಿಐಗೆ ಜಿಲ್ಲೆಯ ಮೂವರು ಆಯ್ಕೆ

• ಪ್ರಜೋದಯ ವರದಿ







**ಹಾಸನ:** ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಡಳಿತ ಸಮಿತಿಗೆ ಜಿಲ್ಲೆಯ ಮೂವರಿಗೆ ಪ್ರಾತಿನಿಧ್ಯ ಸಿಕ್ಕಿದೆ.

ಸೆ.26ರಂದು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಎಫ್‌ಕೆಸಿಸಿಐ ಕಚೇರಿಯಲ್ಲಿ ನಡೆದ ವಾರ್ಷಿಕ ಚುನಾವಣೆಯಲ್ಲಿ ಕೈಗಾರಿಕೋದ್ಯಮಿ ಹೆಚ್.ಎ.ಕಿರಣ್, ಡಿ.ನಿಶ್ಚಯ್ ಹಾಗು ಹೆಚ್.ಸಿ.ಭರತ್ ಅವರು ಆಯ್ಕೆಯಾಗಿದ್ದಾರೆ.

ಇದು ರಾಜ್ಯ ಮಟ್ಟದ ಚುನಾವಣೆಯಾಗಿದ್ದು, ತಮ್ಮನ್ನು ಪ್ರತಿನಿಧಿಸುವ ಉದ್ಯಮ ಕ್ಷೇತ್ರದ ನಾಯಕರನ್ನು ಆಯ್ಕೆ ಮಾಡಲು ರಾಜ್ಯಾದ್ಯಂತ ಜನರು ಮತ ಚಲಾಯಿಸಿದರು.

ಹೆಚ್.ಎ.ಕಿರಣ್ ಅವರು ಕಳೆದ 10 ವರ್ಷಗಳಿಂದ ಎಫ್‌ಕೆಸಿಸಿಐ ಪ್ರತಿನಿಧಿಸುತ್ತಿದ್ದಾರೆ. ನಿಶ್ಚಯ್ ಧನ್‌ಪಾಲ್ ಅವರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ಜಂಟಿ ಕಾರ್ಯದರ್ಶಿಯಾಗಿದ್ದು, ಹೆಚ್.ಸಿ.ಭರತ್ ಕಾಮಧೇನು ಸಹಕಾರಿ ವಿದ್ಯಾಶ್ರಮದ ನಿರ್ದೇಶಕ ಹಾಗು ರೋಟರಿ ಹಾಸನ್ ಟೈಗರ್‌ನ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019